**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

# ತಪೋವಾಣಿ

ಸಂ. 6 ಸಂ. 5 ಮೇ 2009 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಹೊಸ ಯುಗ, ಪ್ರಜ್ಞಾ-ಪಲ್ಲಟ ಮತ್ತು 2012 ರಲ್ಲಿ ನಮ್ಮ ಭೂಮಿ ಫೋಟಾನ್ ಬೆಲ್ಟ್-ಅನ್ನು ಪ್ರವೇಶಿಸುವುದು ಮುಂತಾದವುಗಳ ಬಗ್ಗೆ ಬೆಳಕಿನ ಕಾರ್ಯಕರ್ತರು ಮತ್ತು ಬೆಳಕಿನ ಚಾನಲ್‌ಗಳು ಅಗಾಧವಾದ ಜ್ಞಾನವನ್ನು ಸಂಗ್ರಹಿಸಿದ್ದಾರೆ. ಆದರೆ, ಸರ್ಕಾರಗಳು ಅದನ್ನು ಮುಚ್ಚಿಟ್ಟಿವೆ. ಈ ವಿಷಯ ಹೊಸದೇನಲ್ಲ. ಬಹುಶಃ ಭಯ ಮತ್ತು ಅಸ್ತವ್ಯಸ್ತತೆಯನ್ನು ನಿಭಾಯಿಸಲಾಗದ ಹೆದರಿಕೆಯಿಂದ ಹೀಗೆ ಮಾಡಿರಬಹುದು. ಸರ್ಕಾರಗಳಿಗೆ, ಜನಸಾಮಾನ್ಯರು ಕೇವಲ ಸಂಖ್ಯೆಗಳು ಅಥವಾ ಓಟುಗಳು. ಆದರೆ ಆಧ್ಯಾತ್ಮಿಕ ಮುಖಂಡರಿಗೆ, ಪ್ರತಿ ವ್ಯಕ್ತಿಯೂ ಒಂದು ಆತ್ಮ ಮತ್ತು ಅವರೆಲ್ಲರ ಆಧ್ಯಾತ್ಮಿಕ ಪ್ರಗತಿ, ಒಂದು ಜವಾಬ್ದಾರಿ. ವಿಚಿತ್ರವೆಂದರೆ, ಮೀಡಿಯಾ ಈ ಜ್ಞಾನವನ್ನು ಸಂಪೂರ್ಣವಾಗಿ ಅಲಕ್ಷ್ಯಮಾಡಿದೆ. ಇದು ವಿಷಾದಕರ ಸಂಗತಿ.

ಸಂಗ್ರಹಿಸಲ್ಪಟ್ಟಿರುವ ಎಲ್ಲ ಜ್ಞಾನವೂ ಇಂಟರ್‌ನೆಟ್‌ನಲ್ಲಿ ಲಭ್ಯವಿದೆ. ನಾವು ವಿಳಂಬಮಾಡದೆ ಇಂಟರ್‌ನೆಟ್ ಮತ್ತು ಬ್ಲಾಗ್‌ಗಳಿಗೆ ಹೋಗಿ ಈ ಜ್ಞಾನವನ್ನು ತಿಳಿಯಬೇಕು. ಏನು ಆಗುತ್ತಿದೆ ಮತ್ತು ಮುಂದೆ ಏನು ಆಗುತ್ತದೆ ಎಂಬುದನ್ನು ನಾವು ತಿಳಿಯಬೇಕು. 2012ಕ್ಕೆ, ಹೊಸಯುಗಕ್ಕೆ ನಾವು ಸಿದ್ಧರಾಗಬೇಕು. ಇವುಗಳ ಬಗ್ಗೆ ತಿಳಿಸುವ New Age Realities Beyond East and West ಎಂಬ ಒಂದು ಸಮಗ್ರವಾದ ಮಾಹಿತಿ ಇರುವ ಪುಸ್ತಕವನ್ನು ನಾವು ಪ್ರಕಟಿಸಿದ್ದೇವೆ ಮತ್ತು 18-5-2009ರಂದು "2012" ಎಂಬ ಹೆಸರಿನಲ್ಲಿ ಒಂದು ವಿಶೇಷ ಪುಸ್ತಕವನ್ನು ಪ್ರಕಟಿಸುತ್ತಿದ್ದೇವೆ. ಇವುಗಳೊಂದಿಗೆ, ನಾವು ಓದುಗರ ಕೈಗಳಲ್ಲಿ ಬಹು ಮುಖ್ಯವಾದ ಜ್ಞಾನವನ್ನು ಇಡುತ್ತಿದ್ದೇವೆ. ಇವುಗಳ ಜೊತೆಗೆ, ನಾನು ಜನರಿಗೆ ವಿಶೇಷವಾಗಿ 2012ರಲ್ಲಿ ಸಂಭವಿಸಬಹುದಾದ ಘಟನೆಗೆ, ತರಬೇತಿ ಕೊಡಲು ಇಚ್ಛಿಸುತ್ತೇನೆ. ಒಂದು ರೀತಿಯಲ್ಲಿ ಈ ಕೆಲಸವನ್ನು ನಾವು ಈಗಾಗಲೇ ನಮ್ಮ ಧ್ಯಾನ ತರಗತಿಗಳಲ್ಲಿ ಮಾಡುತ್ತಿದ್ದೇವೆ. ಆದರೆ, ಯಾರೊಬ್ಬರೂ ಜಾಗೃತರಾಗುತ್ತಿರುವಂತೆ ಮತ್ತು ಸಿದ್ಧರಾಗುತ್ತಿರುವಂತೆ ಕಾಣುತ್ತಿಲ್ಲ ಎಂಬುದು ವಿಷಾದನೀಯ. ನಾನು ಅವರಲ್ಲಿ ಯಾವುದೇ ರೀತಿಯ ಆತಂಕವನ್ನೂ ಕಾಣುತ್ತಿಲ್ಲ, ಇನ್ನು 'ಅರಿವು' ದೂರದ ಮಾತು. ಸಿದ್ಧವಾಗುವುದನ್ನು ಕೊನೆಯವರೆಗೆ ಮುಂದೂಡುವುದು, ಎಲ್ಲ ಅಹಿತಕರ ಘಟನೆಗಳು ಎಲ್ಲೋ, ಯಾರಿಗೋ ಆಗುತ್ತವೆ ಮತ್ತು ನಮಗೆ ತಾಗುವುದಿಲ್ಲ, ನಾವು ಯಾವಾಗಲೂ ಸುರಕ್ಷಿತರು ಎಂದು ಊಹಿಸುವುದು ಮನುಷ್ಯ ಸ್ವಭಾವ.

ಜನರಿಗೆ ಪೂಜಿಸುವುದೆಂದರೆ ಪ್ರೀತಿ. ದೇವರನ್ನು ಪೂಜಿಸುತ್ತಾರೆ, ಒಂದು ಕಲ್ಲನ್ನು ಪೂಜಿಸುತ್ತಾರೆ ಮತ್ತು ನನ್ನನ್ನೂ ಸಹ! ಏಕೆಂದರೆ ಪೂಜಿಸುವುದು ಸುಲಭ! ಪೂಜಿಸುವುದು ಸುಲಭ ಆದರೆ ತತ್ವಗಳನ್ನು ಮತ್ತು ಬೋಧನೆಗಳನ್ನು ಅನುಸರಿಸುವುದು ಕಷ್ಟ ಮತ್ತು ಬೇಜಾರು!

ನಾನು ಯಾವಾಗಲೂ ಪೂಜಿಸಿಕೊಳ್ಳುವ ಮುಜುಗರದಿಂದ ತಪ್ಪಿಸಿಕೊಳ್ಳುತ್ತೇನೆ. ಆದರೆ ಕೆಲವು ಸಾರಿ ಅನಿರೀಕ್ಷಿತವಾಗಿ, ಗೊತ್ತಿಲ್ಲದೇ ಸಿಕ್ಕಿಹಾಕಿಕೊಳ್ಳುತ್ತೇನೆ. ಅಂಥ ಸಮಯಗಳಲ್ಲಿ ನಾನು ಯಾರಿಗೂ ಕಣ್ಣಿಗೆ ಕಾಣಿಸದಂತೆ ಮಾಯವಾಗಬೇಕು ಮತ್ತು ಎಂದಿಗೂ ಹಿಂತಿರುಗಬಾರದು ಎಂದು ಅನ್ನಿಸುತ್ತದೆ. ನನ್ನ ಹತ್ತಿರ ಇರುವ ಜನ ನನ್ನನ್ನು ಮತ್ತು ಸತ್ಯಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ. ಆರಾಧನೆ, ಪ್ರೀತಿ ಮತ್ತು ಗೌರವಗಳ ಸಂಕೇತ. ಇವು ಪೂಜೆಗಳು ಮತ್ತು ಕಂದಾಚಾರಗಳಲ್ಲಿ ಬಿಂಬಿಸುವುದಿಲ್ಲ. ಉಪದೇಶಗಳನ್ನು ಮತ್ತು ಮಾರ್ಗದರ್ಶನಗಳನ್ನು ಘನತೆ ಮತ್ತು ವಿವೇಚನೆಯಿಂದ ಅನುಸರಿಸುವುದರಲ್ಲಿ ಆರಾಧನೆ ಅತ್ಯುತ್ತಮವಾಗಿ ಪ್ರಕಟವಾಗುತ್ತದೆ. ಆರಾಧನೆ ಒಂದು ಸಾರಿ ಮಾಡಿ ಮುಗಿಸುವ ಪೂಜೆ ಅಲ್ಲ. ಅದು ಆದರ್ಶಗಳನ್ನು ನಿರಂತರವಾಗಿ ಪಾಲಿಸುವ ಒಂದು ಯತ್ನ.

ಈ ಭೂಮಿಯ ಮೇಲೆ ನಾನು 70 ವರ್ಷಗಳನ್ನು ಪೂರೈಸುತ್ತಿದ್ದೇನೆ. ನಾನು ಇಲ್ಲಿಗೆ ಬಂದೆ, ಇಲ್ಲಿ ವಾಸಿಸಿದೆ. ಇದಕ್ಕೆ ನನಗೆ ಸಂತೋಷವೆನಿಸುತ್ತದೆ. ಇಲ್ಲಿ ನಾನು ಅನೇಕ ಪಾಠಗಳನ್ನು ಕಲಿತೆ, ಒಳ್ಳೆಯ ಅನುಭವಗಳನ್ನು ಪಡೆದೆ ಮತ್ತು ಸುಂದರವಾದ ಜನರನ್ನು ಸಂಧಿಸಿದೆ. ನನ್ನ ಗುರುವಿನ ಕೆಲಸವನ್ನು ಮುಂದುವರೆಸಿದೆ ಮತ್ತು ನಾನು ಮಾಡಬೇಕಾದುದು ಬಹಳಷ್ಟಿದೆ ಎಂದು ನನಗೆ ಗೊತ್ತು. ಅದಕ್ಕೆಲ್ಲ ಒಂದು ಜೀವಿತ ಕಾಲ ಸಾಲದು. ಅದಕ್ಕಾಗಿ ನಾನು ಮತ್ತೆ ಮತ್ತೆ ಬರುತ್ತೇನೆ. ನಾನು ಸೀಮಾಳ ಲೇಖನ ಮತ್ತು ಟ್ವಿಂಕಲ್‌ಳ ಬರಹವನ್ನು ಓದಿದಾಗ, ನನ್ನ ಕಣ್ಣುಗಳು ನೀರೂರಿದವು. ಎಷ್ಟೊಂದು ಪ್ರೀತಿ ಮತ್ತು ಎಂತಹ ಗಾಢವಾದ ಗ್ರಹಿಕೆ! ಅವರ ಮಾತುಗಳಿಗೆ ತಕ್ಕಂತೆ ಬದುಕಲು ಪ್ರಯತ್ನಿಸುತ್ತೇನೆ. ಯಾರೇ ಆದರೂ ಮಾಡುವ ಅತ್ಯುತ್ತಮ ಕೆಲಸ ಅದೇ. ▫

ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
© (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@saptarishis.com ವೆಬ್-ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫ಼ೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.

**ಗುರೂಜಿಯವರ ಬ್ಲಾಗ್**
lightdivine.blogspot.com



**ಗುರೂಜಿಯವರು ಮುಂಬಯಿಯಲ್ಲಿ 7.4.2009 ರಂದು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು. ಈ ಸಂದರ್ಭದಲ್ಲಿ ಮರಾಠಿ ಅನುವಾದಿತ "ಪ್ರಕಾಶ್‌ವಾಟ್" ಮತ್ತು "ಐಗುರೂಜಿ" ಪುಸ್ತಕಗಳನ್ನು ಗುರೂಜಿಯವರು ಬಿಡುಗಡೆಮಾಡಿದರು.**

## ಸುದ್ದಿ–ಸೂಚನೆ

- ಗುರುಜಿಯವರ 70 ನೇ ಹುಟ್ಟುಹಬ್ಬದ ಸಮಾರಂಭದ ದಿನ 4ಭಾಷೆಗಳಲ್ಲಿ, 7ಪುಸ್ತಕಗಳನ್ನು 24–5–2009 ರಂದು ಬಿಡುಗಡೆಮಾಡಲಾಗುವುದು.
- "i-Guruji (Part II)", "2012-A Overview" ಮತ್ತು "The Light" ಪುಸ್ತಕಗಳನ್ನು ಅಂದಿನ ದಿನ ಪ್ರಕಟಿಸಲಾಗುವುದು.
- ಮಾರ್ಚ್ 29ರಂದು ಆನೇಕಲ್ಲಿನಲ್ಲಿ ಮತ್ತು ಏಪ್ರಿಲ್ 14 ಮತ್ತು 15 ರಂದು ತಪೋನಗರದಲ್ಲಿ ಗುರೂಜಿಯವರು ಓರಿಯಂಟೇಷನ್ ತರಗತಿಗಳನ್ನು ನಡೆಸಿಕೊಟ್ಟರು.
- ಆನೇಕಲ್ ಧ್ಯಾನ ಕೇಂದ್ರದ ಮೊದಲನೇ ವಾರ್ಷಿಕೋತ್ಸವವನ್ನು 27–4–2009 ರಂದು ಅನೇಕಲ್‌ನಲ್ಲಿ ಆಚರಿಸಲಾಯಿತು.
- ಚಿಕ್ಕಗುಬ್ಬಿಯಲ್ಲಿ ಒಂದು ಹೊಸ ಬಸ್ ನಿಲ್ದಾಣವನ್ನು 18–5–2009ರಂದು ಉದ್ಘಾಟಿಸಲಾಗುತ್ತದೆ.
- 1–5–2009ರಿಂದ ಶುಕ್ರವಾರದ ಲೈಟ್ ಚಾನಲಿಂಗ್ ಸೆಷನ್ ಬೆಳಿಗ್ಗೆ 11ಘಂಟೆಗೆ ಬದಲಾಗಿ ಬೆಳಿಗ್ಗೆ 10ಘಂಟೆಯಿಂದ ಪ್ರಾರಂಭವಾಗುತ್ತದೆ.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಶನಿ | ಶುಕ್ಲ ಅಷ್ಟಮಿ |
| 04 | ಸೋಮ | ಶುಕ್ಲ ದಶಮಿ |
| 09 | ಶನಿ | ಬುದ್ಧಪೂರ್ಣಿಮಾ |
| 17 | ಭಾನು | ಕೃಷ್ಣ ಅಷ್ಟಮಿ |
| 23 | ಶನಿ | ಮಾಸ ಶಿವರಾತ್ರಿ |
| 24 | ಭಾನು | ಅಮಾವಾಸ್ಯೆ |

## ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 1–3–2009 | ಶಾಂತ ಮತ್ತು ಅಲಮೇಲು |
| 8–3–2009 | ಸಂಜಯ್ ಕರ್‌ಕರೆ, ಸ್ವರೂಪರಾಣಿ & ಆನೇಕಲ್‌ನ ಒಬ್ಬ ಹಿತೈಷಿ |
| 15–3–2009 | ಪುಂಡಲೀಕ್ ಧಾಕೋರ್‌ಕರ್ & ರೀನಾ ಗುಜ್‌ರಾಲ್ |
| 22–3–2009 | ರೂಪ ಕೆ.ಎಸ್. & ಸಿ.ಸ್ವಾಮಿನಾಥನ್ |
| 29–3–2009 | ಸ್ಮಿತಾಶೆಟ್ಟಿ & ಅಜಯ್‌ಕುಮಾರ್ |

**ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು**
ಶ್ರೀ. ವಿಜಯಕುಮಾರ್, ಶ್ರೀ. ಬ್ರಜಬಂಧುಮಿಶ್ರ ಮತ್ತು ಉಷಾ ಸತೀಶ್‌ಚಂದ್ರ

**"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.**

## ಗುರೂಜಿಯವರ 70ನೇ ಹುಟ್ಟುಹಬ್ಬ ಕಾರ್ಯಕ್ರಮ
## 24–5–2009, ಭಾನುವಾರ

| | |
|---|---|
| ಬೆಳಿಗ್ಗೆ 11ಘಂಟೆ | ಓಂಕಾರ |
| | ಸ್ವಾಗತ |
| | ಭಾಷಣಗಳು |
| | ಗುರೂಜಿಯವರಿಂದ ಸಂದೇಶ |
| | ಪುಸ್ತಕಗಳ ಬಿಡುಗಡೆ |
| | ವಿಶೇಷ ಧ್ಯಾನ |
| | ಗುರೂಜಿಯವರಿಂದ ಆಶೀರ್ವಾದಗಳು |
| ಮಧ್ಯಾಹ್ನ 12.30 | ಪ್ರಸಾದ |

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | ಉಪನ್ಯಾಸಗಳು ಬೆಳಿಗ್ಗೆ 11 ರಿಂದ 12ವರೆಗೆ ವಿಶೇಷ ಧ್ಯಾನ: ಮಧ್ಯಾಹ್ನ 12 ರಿಂದ 1ರವರೆಗೆ |
| ಶುಕ್ರವಾರಗಳು | ಲೈಟ್ ಚಾನೆಲ್: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ |
| ಮೇ 9 | ಬುದ್ಧಪೂರ್ಣಿಮಾ ವಿಶೇಷ ಧ್ಯಾನ: ಮಧ್ಯಾಹ್ನ 12 ರಿಂದ 1ರವರೆಗೆ |
| ಮೇ 10 | ಶಂಬಲ ವಿಶೇಷ ಗ್ರೂಪ್ ಮಧ್ಯಾಹ್ನ 2ಘಂಟೆಗೆ ಸಂಧಿಸುತ್ತದೆ. |
| ಮೇ 31 | ಅಖಂಡ ಧ್ಯಾನ: ಬೆಳಿಗ್ಗೆ 10 ರಿಂದ 1ರವರೆಗೆ |

## ತಪೋನಗರ ಡೈರಿ

ತಪೋನಗರ ಬೆಂಗಳೂರಿನ ಹೊರವಲಯ ದಲ್ಲಿದೆ. ಆದರೂ ನಗರವು ಅತ್ಯಂತ ವೇಗವಾಗಿ ತಪೋನಗರವನ್ನು ಸಮೀಪಿಸುತ್ತಿದೆ. ಹೊಸದಾಗಿ ಪ್ರಾರಂಭಿಸಲ್ಪಟ್ಟಿರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನನಿಲ್ದಾಣವನ್ನು ತಲುಪುಲು ಇರುವ ಎರಡನೇ ಮಾರ್ಗ ಕೂಡ ಸಪ್ತರ್ಷಿ ಕೇಂದ್ರಕ್ಕೆ ಒಯ್ಯುತ್ತದೆ. ಹೊಸದಾಗಿ ನಿರ್ಮಿಸಲ್ಪಟ್ಟಿರುವ ರಸ್ತೆಗಳು ತಪೋನಗರಕ್ಕೆ ತಲುಪುವುದನ್ನು ಸುಲಭಗೊಳಿಸಿ, ಪ್ರಯಾಣದ ಸಮಯವನ್ನು ಬಹಳಷ್ಟು ಕಡಿಮೆಗೊಳಿಸಿವೆ. ಆದರೂ ಋಷಿ–ಕೇಂದ್ರವು ಪ್ರಧಾನ ಮಾರ್ಗದಿಂದ ಹೊರಗಿದ್ದು ತನ್ನ ಪ್ರಶಾಂತತೆಯನ್ನು ಉಳಿಸಿ ಕೊಂಡಿದೆ. ಈಗ ತಪೋನಗರ ಬೆಂಗಳೂರಿಗೆ ಹತ್ತಿರದಲ್ಲಿದೆ ಹಾಗೆಯೇ ದೂರದಲ್ಲೂ ಇದೆ. ಇದು ಗುರೂಜಿಯವರು ಒತ್ತಿ ಹೇಳುವ, "ಆಧ್ಯಾತ್ಮಿಕ ಮತ್ತು ಲೌಕಿಕತೆಗಳನ್ನು ಸಮದೂಗಿಸುವ" ತತ್ವದಂತಿದೆ.

ಜನರ ಸಂಖ್ಯೆ ಹೆಚ್ಚುತ್ತಿದ್ದರೂ ತಪೋನಗರ ತನ್ನ ಸಸ್ಯ–ಪ್ರಾಣಿ ಸಂಕುಲವನ್ನು ಉಳಿಸಿಕೊಂಡಿದೆ. ಹಿಂದೆ ಈ ಸ್ಥಳ ವಿವಿಧ ಜಾತಿಯ ಪಕ್ಷಿಗಳ ನಿವಾಸ ಸ್ಥಾನವಾಗಿತ್ತು. ಹೆಸರಾಂತ ಪಕ್ಷಿಶಾಸ್ತ್ರಜ್ಞರೊಬ್ಬರು ತಮ್ಮ ಸಂಶೋಧನೆಗಾಗಿ ಇಲ್ಲೇ ವಾಸವಾಗಿದ್ದರು. ಅನ್ವರ್ಥಕವಾಗಿ ಈ ಹಳ್ಳಿ ಸ್ಥಳೀಯ ಭಾಷೆಯಲ್ಲಿ 'ಚಿಕ್ಕಗುಬ್ಬಿ'ಎಂದು ಕರೆಯಲ್ಪಟ್ಟಿದೆ.

ಹತ್ತಿರದಲ್ಲೇ ಒಂದು ಕೆರೆಯಿದೆ. ಅನೇಕರಿಗೆ ಇದು ತಿಳಿದಿಲ್ಲ. ಅದರಲ್ಲಿ ಕಮ್ಮಿ ನೀರಿದ್ದರೂ ಸಹ ಅನೇಕ ಕೀಟಗಳು, ಹಾವು ಮತ್ತು ಪಕ್ಷಿಗಳಿಗೆ ಆವಾಸ ಸ್ಥಾನವಾಗಿದೆ. ಅದರ ಇನ್ನೊಂದು ಬದಿಗೆ ಕೆಲವೇ ಮೀಟರ್ ದೂರದಲ್ಲಿ ಅಂತರಮಾನಸವಿದೆ.

ಸುತ್ತಮುತ್ತ, ವಿಶೇಷವಾಗಿ ತಪೋವನದಲ್ಲಿ ಬಹಳ ಹಾವುಗಳಿವೆ. ವಿಶಿಷ್ಟ ಜಾತಿಯ ಪಕ್ಷಿಗಳು, ಚೇಳುಗಳು, ಮೊಲ ಮತ್ತು ನಾಗರಹಾವುಗಳು ಸಹ ಅಂತರ ಮಾನಸದಲ್ಲಿ ವಾಸಿಸುತ್ತವೆ.

20 ವರ್ಷಗಳ ಹಿಂದೆ ಗುರೂಜಿಯವರು ತಪೋನಗರವನ್ನು ಹುಟ್ಟುಹಾಕಿದರು; ಪ್ರಕೃತಿಯ ಮಡಿಲಲ್ಲಿ ಅದನ್ನಿಟ್ಟರು. ಇಂದು ಅದು ದೈವತ್ವದಿಂದ ಪ್ರಜ್ವಲಿಸುತ್ತಿದೆ.

## ಗುರೂಜಿ, ಟ್ವಿಂಕಲ್‌ನ ಬ್ಯಾಟ್‌ಮ್ಯಾನ್

**ಟ್ವಿಂಕಲ್**

(ಟ್ವಿಂಕಲ್ ಮತ್ತು ಗುರೂಜಿ ಸಾವಿರಾರು ವರ್ಷಗಳಿಂದಲೂ ಪರಸ್ಪರ ಪರಿಚಿತರು ಮತ್ತು ಈ ಜೀವಿತ ಕಾಲದಲ್ಲಿ 25 ವರ್ಷಗಳಿಂದ, ಟ್ವಿಂಕಲ್ ಹುಟ್ಟಿದಂದಿನಿಂದ ಪರಿಚಿತರು.)

ಒಂದು ವೇಳೆ ಬ್ಯಾಟ್‌ಮಾಮ, "ಬ್ಯಾಟ್‌ಮಾಮ, ದಿ ಬ್ಯಾಟ್‌ಮ್ಯಾನ್"ರವರ ಬಗ್ಗೆ ಮಾತನಾಡು ಎಂದರೆ, ಏನು ಹೇಳಬಲ್ಲೆ ಎಂದು ಬಹಳ ದಿನದಿಂದ ಬೆರಗುಗೊಂಡಿದ್ದೇನೆ! ಈವರೆಗೂ ನನಗೆ ಇದಕ್ಕೆ ಉತ್ತರ ದೊರಕಿಲ್ಲ. ವಿವರಿಸಲು ಬಹುಶಃ ಸರಿಯಾದ ಶಬ್ದಗಳೇ ಸಿಗುವುದಿಲ್ಲ. ನಿಮ್ಮದೇ ಆದ ಒಂದು ಭಾಗವನ್ನು ಪ್ರತ್ಯೇಕವಾಗಿ ಹೇಗೆ ವಿವರಿಸಬಲ್ಲಿರಿ? ನಮ್ಮ ತಾಯಿತಂದೆಯರನ್ನು ನಾವೆಷ್ಟು ಪ್ರೀತಿಸುತ್ತೇವೆ ಎಂದು ಹೇಳಲು ಶಬ್ದಗಳು ಸಿಗದಂತೆ, ಇದೂ ಕೂಡ. ಅವರು ಅತ್ಯಂತ ಅಮೂಲ್ಯವಾದವರು.

ನಾನು ಯಾವಾಗಲೂ ಅದೃಷ್ಟಶಾಲಿ. ಏಕೆಂದರೆ ನನಗೆ ತಾಯಿತಂದೆಯರ ಪ್ರೀತಿ, ಕೌಟುಂಬಿಕ ಪ್ರೀತಿ ದೊರೆತಿದೆ. ಇದೆಲ್ಲಕ್ಕೂ ಕಿರೀಟವಿಟ್ಟಂತೆ ನನಗೆ ಬ್ಯಾಟ್‌ಮ್ಯಾನ್‌ರವರ ಪ್ರೀತಿ ದೊರೆತಿದೆ.

ನೆನಪಿನ ಆಳಕ್ಕೆ ಇಳಿದಾಗ, ನನಗೆ ನೆನಪಿರುವಂತೆ, ನಾನು ಬ್ಯಾಟ್‌ಮ್ಯಾನ್‌ರವರನ್ನು ಕಂಡಕೂಡಲೆ, ಶಾಲೆಯ ಬ್ಯಾಗನ್ನು ಚಕ್ಕನೆ ಎಸೆದು, ಷೂಗಳನ್ನು ಬಿಸಾಕಿ, ಅವರ ಹೆಸರನ್ನು ಕೂಗುತ್ತಾ ರಸ್ತೆಯುದ್ದಕ್ಕೂ ಓಡಿಬರುತ್ತಿದ್ದೆ. ಮತ್ತು ಅವರ ಮೇಲೆ ಏರಿ ಕುಳಿತು ನನ್ನನ್ನು ಎತ್ತಿಕೊಂಡು ಹೋಗಲು ಒತ್ತಾಯಿಸುತ್ತಿದ್ದೆ. ಅಂದಹಾಗೆ ನಾನಿನ್ನೂ ಆಗ ಕಿಂಡರ್‌ಗಾರ್ಟನ್‌ನಲ್ಲಿ ಓದುತ್ತಿದ್ದೆ.

ನಾನು ಮತ್ತು ಬ್ಯಾಟ್‌ಮ್ಯಾನ್‌ರವರು ಇಬ್ಬರೂ ಮನೆಯಿಂದ ಸ್ವಲ್ಪದೂರ ಇರುವ ಕಿರಾಣಿ ಅಂಗಡಿಗೆ, ಅವರ ಮೊಪೆಡ್ ಮೇಲೆ, ಶಾಪಿಂಗ್ ಹೋಗುತ್ತಿದ್ದೆವು. ನೇರವಾಗಿ ಮನೆಗೆ ಹೋಗದೆ, ನಾನು ಚಾಕೋಲೇಟ್ ತಿಂದು ಮುಗಿಸುವವರೆಗೂ, ಸುತ್ತಲೂ ಎಲ್ಲ ಬೇರೆಬೇರೆ ರಸ್ತೆಗಳಿಗೆ ಹೋಗುತ್ತಿದ್ದೆವು. ಅದೊಂದು "ನಮ್ಮ ಚಿಕ್ಕ ಗುಟ್ಟು" ಆಗಿತ್ತು.

ನಾನು 4 ವರ್ಷದವಳಿದ್ದಾಗ ಅವರೂ ಸಹ 4 ವರ್ಷದವರಾಗಿದ್ದರು; ನಾನು ಹದಿ–ಹರೆಯ ದವಳಾದಾಗ, ಅವರೂ ಹದಿ–ಹರೆಯ ದವರಾಗಿದ್ದರು; ಮತ್ತು ಈಗ ಅವರಿಗೆ 25 ವರ್ಷ ಏಕೆಂದರೆ ನನಗೆ 25 ವರ್ಷವಾಗಿದೆ. ಅವರು ಯಾವಾಗಲೂ ಒಬ್ಬ ಉತ್ತಮ ಸ್ನೇಹಿತ, ಮಾರ್ಗದರ್ಶಿ ಮತ್ತು ಎಲ್ಲವೂ ಆಗಿದ್ದಾರೆ.

ಅವರ ಹತ್ತಿರ ಬಂದ ಎಲ್ಲರನ್ನೂ ಅವರು ಅಳುವಂತೆ ಮಾಡುತ್ತಾರೆ ಎಂದು ನಾನು ಬ್ಯಾಟ್‌ಮ್ಯಾನ್‌ರವರನ್ನು ಚುಡಾಯಿಸುತ್ತಿರುತ್ತೇನೆ! ಇಲ್ಲಿರುವ ಮುಖ್ಯ ಸಂಗತಿಯೆಂದರೆ– ಮನುಷ್ಯರು ತಮ್ಮೆಲ್ಲ ಪ್ರಯತ್ನಗಳಿಂದ ಸಶಕ್ತರಾಗಿರಲು ಬಯಸಿದರೂ, ಒರಗಲು ಭುಜವೊಂದು ದೊರೆತಾಗ ಸುಲಭವಾಗಿ ಅಳುತ್ತಾರೆ. ಪ್ರೇಮ ಮತ್ತು ಕರುಣೆಯಿಂದ ತುಂಬಿದ್ದಾರೆ ನನ್ನ ಬ್ಯಾಟ್‌ಮ್ಯಾನ್. ಅವರೊಂದಿಗೆ ಅತ್ಯಂತ ಸುಲಭವಾಗಿ ಮಾತನಾಡಬಹುದು. ಕಾರಣ ಅವರು ನಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಾರೆ. ಹೆಚ್ಚಿನ ವಿವರಣೆಗಳಿಲ್ಲದೆ ಅವರು ಅರ್ಥ ಮಾಡಿಕೊಳ್ಳುತ್ತಾರೆ, ಮತ್ತು ಅತಿ ಮುಖ್ಯವಾಗಿ ಅವರೊಂದಿಗೆ ಮಾತನಾಡುತ್ತಿರುವವರನ್ನು ತೀರ್ಪುಗಾರನ ದೃಷ್ಟಿಯಿಂದ ನೋಡುವುದಿಲ್ಲ. ಅವರು ಯಾವಾಗಲೂ ಆಸರೆಯಾಗಿರುತ್ತಾರೆ. ಹಲವು ಆಯ್ಕೆಗಳನ್ನು ನಮ್ಮ ಮುಂದಿಟ್ಟು, ನಿರ್ಧರಿಸಲು ನಮಗೆ ಹೇಳುತ್ತಾರೆ.

ಅವರೆಂದೂ ತಮ್ಮ ಅಭಿಪ್ರಾಯಗಳನ್ನು ನಮ್ಮ ಮೇಲೆ ಹೇರುವುದಿಲ್ಲ. ನಾವು ಸರಿಯಿದ್ದರೆ, ಒಳ್ಳೆಯದು. ಒಂದು ವೇಳೆ ನಾವು ತಪ್ಪಿದ್ದರೂ ಸಹ ನಮ್ಮ ಹಿಂದೆ ಇರುತ್ತಾರೆ, ವಿಷಮ ಸನ್ನಿವೇಶಗಳಲ್ಲಿ ಸಹಾಯ ಹಸ್ತ ನೀಡುತ್ತಾರೆ ಮತ್ತು ನಮ್ಮ ಕಾರ್ಯಗಳಿಗೆ ನಾವೇ ಜವಾಬ್ದಾರಿ ತೆಗೆದುಕೊಳ್ಳುವುದನ್ನು ಕಲಿಸುತ್ತಾರೆ.

ಅವರೊಬ್ಬ ಋಷಿ, ನಿಜವಾದ ಆಧ್ಯಾತ್ಮಿಕ ಜೀವಿ. 'ಇಲ್ಲ' ಎಂದು ಹೇಳಬೇಕಾದ ಸಂದರ್ಭದಲ್ಲಿ 'ಇಲ್ಲ' ಎಂದೇ ಹೇಳುವವರು. ಅವರು ಜೀವನವನ್ನು ನೋಡುವ ರೀತಿ ಪರಿಪೂರ್ಣ ವಾಗಿದೆ. ಅವರು ಶುದ್ಧ ಪ್ರೇಮದ ಗಣಿ. ಆದರೂ ಸಹ, ಅವರು ತಾವು ಜೀವನ ಏನೆಲ್ಲಾ ಒದಗಿಸುತ್ತದೋ ಅದೆಲ್ಲವನ್ನೂ ಆನಂದಿಸುತ್ತಾ, ತಪ್ಪುಗಳನ್ನು ಮಾಡುತ್ತಾ ಅವುಗಳಿಂದ ಕಲಿಯುತ್ತಾ ಇರುವ ಅಪರಿಪೂರ್ಣ ವ್ಯಕ್ತಿಯಂತೆ ಕಾಣುತ್ತಾರೆ. ಹೀಗೆ ಭೂಮಿಯ ಮೇಲಿನ ಜೀವನದ ರೀತಿಯನ್ನು ಗೌರವಿಸುವ ಇವರು, ದೇವರು ನಮಗೆಲ್ಲರಿಗೂ ಕೊಟ್ಟಿರುವ ಅತಿ ದೊಡ್ಡ ಕಾಣಿಕೆ.

ನಾನು ಬ್ಯಾಟ್‌ಮ್ಯಾನ್‌ರವರಲ್ಲಿ ಇರುವ ಫ್ರೀಕಿತನ ವನ್ನು ಇಷ್ಟಪಡುತ್ತೇನೆ. ನಾವು ಯಾವಾಗಲೂ ಜಗಳದೊಂದಿಗೆ ದಿನ ಆರಂಭಿಸುತ್ತೇವೆ. ನನ್ನನ್ನು ಬೆಳಿಗ್ಗೆ ಬೇಗ ಎಬ್ಬಿಸಲು ಅವರಿಗೆ ನಾನು ಹೇಳುತ್ತೇನೆ. ಅವರು ನನ್ನನ್ನು ಎಬ್ಬಿಸಲು ಶುರು ಮಾಡುತ್ತಾರೆ. ಆದರೆ ಇಲ್ಲಿ ಒಂದು ತಮಾಷೆ ಏನೆಂದರೆ, ನನಗೆ ಇಷ್ಟವಿಲ್ಲದಿರುವ ಒಂದೇ ಒಂದು ಸಂಗತಿ, ಬೆಳಿಗ್ಗೆ ಬೇಗ ಏಳುವುದು! ನಾನು ಹುಚ್ಚಳಾಗುವಷ್ಟು, ಅವರು ಪದೇ ಪದೇ ನನ್ನನ್ನು ಎಬ್ಬಿಸುತ್ತಾರೆ. ಪ್ರತಿ ವಸ್ತುವೂ ಅದರ ಸ್ಥಳ ದಲ್ಲಿರಬೇಕು, ರೀಡಿಂಗ್ ಟೇಬಲ್ ಯಾವಾಗಲೂ ಚೊಕ್ಕಟವಾಗಿರಬೇಕು ಎನ್ನುವ ಗೀಳು ಅವರಿಗೆಷ್ಟೆಂದರೆ, ಅದು ನನ್ನನ್ನು ಹುಚ್ಚಳನ್ನಾಗಿ ಸುವಷ್ಟು! "ನಿನಗೆ ನನ್ನಂತೆಯೇ ಇರುವ ಪತಿ ಸಿಗುತ್ತಾನೆ" ಎಂದು ತಮಾಷೆಯಾಗಿ ಅವರು ಹೇಳುತ್ತಿದ್ದರು. ನನಗೆ ಅವರಂತೆಯೇ ಇರುವ ಗಂಡನೇ ಸಿಕ್ಕಿದ್ದಾನೆ! ಈಗ ನಾನು, "ನೀವು ತಮಾಷೆಗಾಗಿಯಾದರೂ ಏನನ್ನಾದರೂ ಹೇಳಿದರೂ ಅದೂ ಸಹ ಸತ್ಯವಾಗುತ್ತದೆ. ಇನ್ನು ನನ್ನ ಕಥೆ ಬಿಟ್ಟುಬಿಡಿ!" ಎಂದು ಹೇಳುತ್ತೇನೆ.

ನಾವಿಬ್ಬರೂ ಒಟ್ಟಿಗೆ ಜನ್ಮಾಂತರಗಳಿಗೆ ಸಾಕಾಗುವಷ್ಟು ನೆನಪುಗಳನ್ನು ಸೃಷ್ಟಿಸಿದ್ದೇವೆ. ನಾನು ನಿಮ್ಮೊಂದಿಗೆ ಅವೆಲ್ಲವನ್ನೂ ಹಂಚಿಕೊಳ್ಳಲು ಇಷ್ಟಪಡುತ್ತಿದ್ದಂತೇ, ಹಿಂದೆಯೇ ನನ್ನಲ್ಲಿ ಇನ್ನೊಂದು ಆಲೋಚನೆ ಮೂಡುತ್ತದೆ – ನಾನು ಅವುಗಳನ್ನೆಲ್ಲ "ನಮ್ಮ ಚಿಕ್ಕ ಗುಟ್ಟುಗಳಾಗಿ" ನನ್ನಲ್ಲೇ ಇಟ್ಟುಕೊಳ್ಳ ಬಯಸುತ್ತೇನೆ! ❑

## ಲೈಟ್ ಚಾನಲ್ಸ್

ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಸೊಲೂಂಟ್ರ ಕಿಂಗ್ ಅವರ ಭಾಷಣ

**01–03–2009**

ಈ ಅಗಾಧ ಕಾಲಮಾನದಲ್ಲಿ ಲೈಟ್ ಚಾನಲ್ಸ್ ವಿಶ್ವಸಂಚಲನವು ಒಂದು ಪ್ರಧಾನ ಘಟನೆಯಾಗಿದೆ. ದೇವರುಗಳು, ದೇವತೆಗಳು ಮತ್ತು ಬೆಳಕು ಈ ಘಟನೆಗಾಗಿ ಕೆಲಸ ಮಾಡಿದ್ದಾರೆ. ಬೆಳಕು ಮತ್ತು ಸೃಷ್ಟಿಕರ್ತ ದೇವರ ಆಶೀರ್ವಾದ ಮತ್ತು ಕೃಪೆ ನಮ್ಮ ಮೇಲಿರುವುದಕ್ಕೆ ಎಲ್ಲರ ಪರವಾಗಿ ನಾನು ಧನ್ಯವಾದಗಳನ್ನು ಹೇಳಬಯಸುತ್ತೇನೆ.

ನಿಮ್ಮಲ್ಲಿ ಕೆಲವರು ನಿಜವಾಗಿ ನೀವು ಯಾರೆಂಬುದನ್ನು ಅರಿತಿಲ್ಲ. ನೀವೆಲ್ಲ ಬೆಳಕಿನ ಜೀವಿಗಳು. ಅನೇಕ ಜನ್ಮಗಳಿಂದ ನೀವು ಬೆಳಕಿಗಾಗಿ ಕೆಲಸ ಮಾಡುತ್ತಿರುವಿರಿ.

26–02–2009 ರಂದು ಪಡೆದ ಬೆಳಕು ಅನೇಕ ವಿಷಯಗಳನ್ನು ತ್ವರಿತಗೊಳಿಸಿದೆ. ನಾವು ಮಾಡುತ್ತಿರುವ ಎಲ್ಲ ಕೆಲಸ ಈ ದಿನ ಶಿಖರಕ್ಕೇರಿದೆ. ಆದರೆ ಎಷ್ಟೋ ಆತ್ಮಗಳಿಗೆ ಏನಾಗುತ್ತಿದೆ ಎಂಬುದು ತಿಳಿದಿಲ್ಲ. ಆದ್ದರಿಂದ ನಾವು ಮಾಡಬೇಕಾದ ಕೆಲಸ ಬಹಳ ಇದೆ. ಬೆಳಕು ಮಾನವ ಕುಲದಲ್ಲಿರುವ ಕತ್ತಲೆಯನ್ನು ಹೊರದೂಡಿ ನಾಶಗೊಳಿಸಬೇಕಾಗಿದೆ.

ಮಹಾ ಶಿವರಾತ್ರಿಯ ದಿನ ಶಿವನು ಈ ಭೂಮಿಗೆ ಇಳಿದು ಬಂದಿದ್ದಾನೆ. ಅವನು ಇನ್ನೂ ನಮ್ಮೊಡನೆ ಇದ್ದಾನೆ. ಅವನಿಂದ ನನಗೆ ತಿಳಿದುದೇನೆಂದರೆ 26–02–2009 ರಂದು ಚೈತನ್ಯ ಇಳಿದು ಬಂದಾಗ, ದೇವಿಯು ಭೂಮಿಯ ಎಲ್ಲ ಪ್ರದೇಶಗಳಲ್ಲಿ ತನ್ನನ್ನು ತಾನು ಹರಡಿಕೊಂಡಿದ್ದಾಳೆ ಮತ್ತು ಈ ಭೂಮಿಯ ಮೇಲೆ ಇನ್ನೂ ಇದ್ದ ದುಷ್ಟ ಶಕ್ತಿಗಳೆಲ್ಲ ಹೊರಗೆಹೋಗಿ, ಅವು ತಮ್ಮ ಮೂಲಕ್ಕೆ ಹಿಂದಿರುಗಿವೆ. ದೇವಿ, "ಕಲಿಯುಗ ಮುಗಿದಿದೆ, ನಾವು ಈಗ ಬೆಳಕಿನ ಯುಗದ ಕಡೆಗೆ ಹೊರಟಿದ್ದೇವೆ." ಎಂದು ಹೇಳಿದಳು.

ಮೂಲ ಸೃಷ್ಟಿಕರ್ತನಾದ ಭಗವಂತನಿಂದ ಬೆಳಕು ಕೆಳಗಿಳಿದು ಬಂದಿದೆ. ಈ ಬೆಳಕು ಎಷ್ಟು ಶಕ್ತಿಯುತವಾಗಿದೆ ಎಂದರೆ ನಮ್ಮ ಶರೀರಗಳು ಅದಕ್ಕೆ ಹೊಂದಿಕೊಳ್ಳುತ್ತಿಲ್ಲ. ಆದರೆ ನಮ್ಮ ದೇಹಗಳಲ್ಲಿ ಎಲ್ಲ ಸಿದ್ಧತೆಗಳು ಬಹಳ ಹಿಂದಿನಿಂದ ಆಗುತ್ತಿರುವುದರಿಂದ ನಮಗೆ ಅಂಥ ಪ್ರತಿಕೂಲ ಪರಿಣಾಮ ಉಂಟಾಗಿಲ್ಲ. ನಾವು ಆ ಬೆಳಕನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗಿ ಮಾನವಕುಲಕ್ಕೆ ಕಳುಹಿಸುವಂತಾಗಿದೆ.

ಬೆಳಕು, ಒಳಗಿನ ಮತ್ತು ಹೊರಗಿನ ಪ್ರಪಂಚಗಳಿಗೆ ಬಾಗಿಲಾಗಿ ಪರಿಣಮಿಸಿದೆ. ಅವೆರಡೂ ಸೇರಿ ಒಂದಾಗಿ ನಮ್ಮನ್ನು ಏಕತೆಯ ಪ್ರಜ್ಞೆಯಲ್ಲಿ ಚಲಿಸಲು ಸಹಾಯ ಮಾಡುತ್ತಿದೆ. ಇದು ಬೆಳಕಿನ ಯುಗದ ಉದಯಕ್ಕೆ ಅಗತ್ಯವಾಗಿದೆ. ❑

## ಗುರೂಜಿಯವರ ನುಡಿಗಳು

**08–03–2009**

ಸಾಮಾನ್ಯವಾಗಿ ನೂರು ವರ್ಷಗಳಲ್ಲಿ ಸಾಧಿಸಬಹುದಾದ ಅನೇಕ ಕಾರ್ಯಗಳನ್ನು ಈ ಮುಂದಿನ ಮೂರು ವರ್ಷಗಳಲ್ಲಿ ಸಾಧಿಸಬಹುದು, ಕಾರಣ, ಇದು ಬಹಳ ಕುತೂಹಲಕಾರಿಯಾದ ಅವಧಿ. ಇದು ದೀರ್ಘವಾದ ದೀಕ್ಷೆಯ ಅವಧಿ. ಫೋಟಾನ್ ಬೆಲ್ಟ್‌ನಿಂದ ಈಗಾಗಲೇ ಚೈತನ್ಯಗಳನ್ನು ಪಡೆಯುತ್ತಿರುವುದರ ಬಗ್ಗೆ ನಾವು ಅರಿಯಲೇಬೇಕು.

ಈ ಚೈತನ್ಯಗಳು ಈಗಾಗಲೇ ಅತ್ಯಂತ ಅದ್ಭುತವಾಗಿ ಕೆಲಸ ಮಾಡುತ್ತಿವೆ. ಅನಾಹುತಗಳು, ವಿನಾಶಗಳು ಮತ್ತು ಕುಸಿತಗಳು ಬಹಳ ಮುಖ್ಯವಾದ ಸಕಾರಾತ್ಮಕ ಹೆಜ್ಜೆಗಳು. ಋಷಿಗಳಿಂದ ನಿರ್ಮಿತವಾದ ದೈವಿಕ ವ್ಯವಸ್ಥೆಗಳು ಜನ್ಮತಳೆಯುತ್ತಿವೆ. ಇವು ಸುಲಭವಾಗಿ ಫೋಟಾನ್ ಬೆಲ್ಟ್–ನೊಳಗೆ ನಮ್ಮನ್ನು ಕರೆದೊಯ್ಯುತ್ತವೆ. ಇವುಗಳ ಬಗ್ಗೆ ಅರಿಯಲು ನಾವು ಧ್ಯಾನ ಮಾಡಬೇಕು, ನಮ್ಮೊಂದಿಗೆ ನಾವು ಸಂಪರ್ಕ ಪಡೆಯಬೇಕು.

ಸೊಲೂಂಟ್ರರವರು 'ಪ್ರೀತಿಸು ಮತ್ತು ಒಪ್ಪಿಕೊ' ಎಂದು ಬಹಳ ಸೊಗಸಾಗಿ ಹೇಳಿದ್ದಾರೆ. ಇದು ಸಪ್ತಋಷಿಗಳ ಮಾರ್ಗದಲ್ಲಿ ಮಂತ್ರವಾಗಿ ಪರಿಣಮಿಸಿದೆ.

ಯಾವುದೇ ಮಾರ್ಗದಲ್ಲಿ ಹೀಗಿರಬೇಕು: ಕ್ರಿಸ್ತನು ಹೇಳಿದಂತೆ ಒಂದು ಮಗುವಿನಂತೆ ಶುದ್ಧ ಮತ್ತು ಸರಳವಾಗಿರಬೇಕಾದರೆ ಧ್ಯಾನಗಳನ್ನು ತೆಗೆದುಕೊಳ್ಳಿ, ಇದರಿಂದ ಆಧ್ಯಾತ್ಮಿಕ ಸಾಧನೆ ಉನ್ನತವಾಗಿ ಬೆಳೆಯುತ್ತದೆ. ಆಗ ನಾವು ಎಲ್ಲಾದರೂ ಇರಬಹುದು, ಒಳ್ಳೆಯವರಾಗಿ ಮತ್ತು ಯಶಸ್ವಿಯಾಗಬಹುದು.

ನಾವು ಶುದ್ಧವಾಗಿದ್ದರೆ, ಸಮರ್ಥವಾಗಿರಬಹುದು. ಶುದ್ಧತೆ ನಮ್ಮ ಬಲವನ್ನು ವೃದ್ಧಿಸಲು ಸಹಾಯ ಮಾಡುತ್ತದೆ ಮತ್ತು ನಮ್ಮ ಪಿತೃವೆನಿಸಿದ ದೇವರು, ನಮ್ಮ ಗುರು ಮತ್ತು ಎಲ್ಲಾ ಋಷಿಗಳ ಬಲವನ್ನು ಶುದ್ಧತೆ ವೃದ್ಧಿಸುತ್ತದೆ. ನಾವು ಶುದ್ಧವಾದರೆ ಮತ್ತು ಸಂಪರ್ಕಗಳಿಸಿದರೆ ನಾವು ಇಡೀ ವಿಶ್ವದ ಬಲವನ್ನು ಪಡೆಯುತ್ತೇವೆ.

ದೈವಿಕರಾಗಿರುವುದು ಸುಲಭ, ಆದರೆ ಮಾನವರಾಗಿರಲು ಬಹಳ ಕಷ್ಟ. ನೀವು ದೈವಿಕವಾಗಿದ್ದರೆ, ನೀವು ಪರಿಪೂರ್ಣರು. ನೀವು ಒಂದು ತಯಾರಿಸಿದ ಸಿದ್ಧವಸ್ತು ಮತ್ತು ದೇವರ ಜೊತೆ ಇದ್ದೀರಿ. ಒಬ್ಬ ಸಾಧಾರಣ ಮಾನವ ಜೀವಿ ದೈವಿಕನಾಗಲು ಬಹಳ ಹೋರಾಟ ಮಾಡುತ್ತಾನಲ್ಲದೆ ಅನೇಕ ಸವಾಲುಗಳನ್ನು ಎದುರಿಸುತ್ತಾನೆ. ಆದರೆ ಈ ಹೋರಾಟದಲ್ಲಿಯೂ ಒಂದು ರೀತಿಯ ಸೊಗಸಿರುತ್ತದೆ. ಹೋರಾಡುವಾಗ ಮತ್ತು ಸವಾಲುಗಳನ್ನು ಎದುರಿಸುವಾಗ ನಾವು ಬೆಳೆಯುತ್ತೇವೆ. ನೀವು ಸಂತೋಷ ಪಡುವ ರೀತಿಯನ್ನು ಅರಿತಿದ್ದೇ ಆದರೆ ಈ ಬೆಳೆಯುವ ವಿಧಾನ ಅತ್ಯಂತ ಸುಂದರವಾಗಿರುತ್ತದೆ. ಆದ್ದರಿಂದ ಮಾನವನಾಗಿ ಇರುವುದು ಸರಳವಲ್ಲ.

**22–03–2009**

ಪ್ರತಿ ಚಕ್ರದಲ್ಲಿ ನಾವು ಋಷಿಗಳ ಜೊತೆ ಇಲ್ಲಿ ಕುಳಿತುಕೊಳ್ಳುತ್ತೇವೆ ಮತ್ತು ಬೆಳೆಯಲು ಪ್ರಯತ್ನಿಸುತ್ತೇವೆ. ಋಷಿಗಳು ಹೇಳುತ್ತಾರೆ: ಈ ರೀತಿ ನಾವು ಕೊನೆಯ ಬಾರಿಗೆ ಇಲ್ಲಿ ಕುಳಿತುಕೊಳ್ಳುವಂತಾಗಲಿ. ನಾವು ಸಾಧನೆಯ ಕೊನೆಯ ಹಂತದಲ್ಲಿದ್ದೇವೆ. ಆದರೆ ನಾವು ಯಾವಾಗಲೂ ಕೊನೆಯ ಹಂತದಲ್ಲಿರುತ್ತೇವೆ. ನಾವು ಯಾವಾಗ ಬೆಳೆಯುತ್ತೇವೆ ಮತ್ತು ಗುರಿಮುಟ್ಟುತ್ತೇವೆ? ನಾವು ಸಾಧನೆಯನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ನಾವು ನಿಜವಾಗಿ ಸೃಷ್ಟಿಯನ್ನು, ಜೀವನದ ಉದ್ದೇಶವನ್ನು ಮತ್ತು ಫೋಟಾನ್ ಬೆಲ್ಟ್–ಅನ್ನು ಅರ್ಥ ಮಾಡಿಕೊಂಡಿದ್ದೇ ಆದರೆ ಸಾಧನೆಯನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೆವು.


ಜನರು ನಾನಾ ಬೇಡಿಕೆಗಳೊಂದಿಗೆ ನನ್ನಲ್ಲಿಗೆ ಬರುತ್ತಾರೆ. ನಾನಿಲ್ಲಿರುವುದು ಸಹಾಯ ಮಾಡಲು; ಯಾವುದೇ ರೀತಿಯಿಂದ ಮತ್ತು ಎಲ್ಲ ಹಂತಗಳಲ್ಲಿ ಸಾಧ್ಯವಾದ ರೀತಿಯಲ್ಲಿ ಸಹಾಯ ಮಾಡಲು ನಾನು ಸಿದ್ಧ. ನಾನು ಇಲ್ಲಿರುವ ಮುಖ್ಯ ಉದ್ದೇಶವೇನೆಂದರೆ ಸಾಧನೆಯಲ್ಲಿ ಬೆಳೆಯಲು ಸಹಾಯ ಮಾಡುವುದು. ಅಲ್ಲದೆ, ಭಾವನಾತ್ಮಕ ಅಥವಾ ಅಧ್ಯಾತ್ಮಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಪರಿಹರಿಸುವುದು ಮತ್ತು ನೀವು ಕೇಳುವ ಯಾವುದೇ ಪ್ರಶ್ನೆಗೆ ಉತ್ತರಿಸುವುದೂ ಆಗಿದೆ. ಆದರೆ ಅದಕ್ಕಾಗಿ ನನ್ನನ್ನು ಪ್ರತ್ಯಕ್ಷವಾಗಿ ನೋಡುವ ಅಗತ್ಯವಿಲ್ಲ.

ನನ್ನನ್ನು ಭೇಟಿ ಮಾಡಲು ನಿಮ್ಮನ್ನು ನಿರುತ್ಸಾಹಗೊಳಿಸುತ್ತಿಲ್ಲ. ನಾನು ಸಂತೋಷದಿಂದ ಮತ್ತು ಪ್ರೀತಿಯಿಂದ ಜನರನ್ನು ಭೇಟಿ ಮಾಡುತ್ತೇನೆ. ಇಂಥ ಭೇಟಿಗಳಲ್ಲಿ ಸೊಗಸಿದೆ. ಆದರೆ ನೀವು ನಿಶ್ಚಲತೆಗೆ ಪ್ರವೇಶಿಸಿ ನನ್ನನ್ನು ಸಂಪರ್ಕಿಸುವುದು ಉತ್ತಮ. ಇದು ಕೆಲಸ ಮಾಡುತ್ತದೆ. ಎಂದು ತಿಳಿದಿದ್ದೇನೆ. ಏಕೆಂದರೆ ಇದು ಕೆಲಸ ಮಾಡಿರುವುದನ್ನು ನೂರಾರು ಸಲ ನೋಡಿದ್ದೇನೆ.

ನೀವು ಬರೆಯಬೇಕೆಂದುಕೊಂಡ ಕ್ಷಣ ಅದು ಋಷಿಗಳ ಅರಿವಿಗೆ ಬರುತ್ತದೆ. ನೀವು ನಿಜವಾಗಿಯೂ ಸಂಕಟದಲ್ಲಿದ್ದರೆ, ಒಂದು ಪ್ರಶಾಂತವಾದ ಸ್ಥಳಕ್ಕೆ ಹೋಗಿ ಋಷಿಗಳೊಡನೆ ಸಂಪರ್ಕ ಸ್ಥಾಪಿಸಿ. ಸಂಪರ್ಕ ಕೂಡಲೆ ದೊರೆತು, ನಿಮಗೆ ನೇರವಾಗಿ ಸಹಾಯ ದೊರೆಯಲಾರಂಭಿಸುತ್ತದೆ. ❑



ಗುರ ... ಜು



ಗುರೂಜಿಯವರು – 1981ರಲ್ಲಿ, ಅಮರರವರ ಜೊತೆ ಕೆಲಸಮಾಡಲು ಸೇರಿಕೊಳ್ಳುವ ಮುನ್ನ



ಗುರೂಜಿಯವರು – 1995ರಲ್ಲಿ, ಮಾನಸದ ಕಟ್ಟಡದ ಮುಂದೆ



ಗುರೂಜಿಯವರ ಮುಖ – ನಮ್ಮಲ್ಲಿ ಸಾಧಕರಾಗಿರುವ ರವಿಷಾರವರು ಕೆತ್ತಿರುವುದು

## ಗುರೂಜಿಯವರ ವಿವೇಕದ ನುಡಿಗಳು

- ನಾವು ಪರಿವರ್ತನೆಯ ಕಡೆ ಪ್ರಯತ್ನಪಟ್ಟರೆ ಸಮಸ್ಯೆಗಳು ತಾವೇ ದೂರವಾಗುತ್ತವೆ.
- ಸಾಧನೆಯ ಸವಾಲು ಪ್ರಯತ್ನದಲ್ಲಿದೆ.
- ನಾವು ಆಧ್ಯಾತ್ಮಿಕತೆಯನ್ನು ಸ್ವಲ್ಪ ವಿತರ್ಕ ದಿಂದಲೇ ಶುರು ಮಾಡಬೇಕಾಗುತ್ತದೆ.
- ಪ್ರತಿಯೊಂದು ಬದಲಾವಣೆ ಮತ್ತು ಪ್ರತಿ ಯೊಂದು ಘಟನೆ ದೇವರಿಂದ ಬರುವ ಒಂದೊಂದು ಕೊಡುಗೆ.
- ಬಯಕೆ ಇಲ್ಲದೆ ಬದುಕಿಲ್ಲ.
- ನಮ್ಮ ಮತ್ತು ದೈವದ ಬಯಕೆಗಳೆರಡೂ ಒಂದೇ ಆದಾಗಲೇ ಯೋಗ.
- ವಿಗ್ರಹ ದೇವರ ಪ್ರತೀಕ. ದೇವರು ವಿಗ್ರಹದಿಂದಾಚೆ ಇರುತ್ತಾನೆ.
- ಪ್ರಳಯದ ಸಮಯ, ನಾವು ಒಳ್ಳೆಯದನ್ನು ಆಯ್ಕೆ ಮಾಡುವ ಸಮಯ.
- ಪ್ರಜ್ಞಾಪೂರ್ವಕವಾಗಿ ನಾವು ಕೆಟ್ಟ ಯೋಚನೆ–ಭಾವನೆಗಳನ್ನು ದೂರಕ್ಕೆ ತಳ್ಳಬೇಕಾದ ಸಮಯ ಈಗ ಬಂದಿದೆ.
- ನಿಜವಾದ ಪ್ರೀತಿಯಿಂದ ನಾವು ಒಬ್ಬರ ಕಡೆ ನಗು ಬೀರಿದರೆ, ಋಷಿಗಳ ಕೆಲಸ ಮಾಡಿದಂತೆ. ಪ್ರತಿಯೊಂದು ನಗುವಿನಲ್ಲಿಯೂ ಸತ್ಯಯುಗ ಚಾನಲ್ ಆಗುತ್ತದೆ.
- ಪ್ರತಿಯೊಂದು ಆತ್ಮಕ್ಕೂ ತಮ್ಮದೇ ಜವಾಬ್ದಾರಿಗಳಿರುತ್ತವೆ.
- ಮಾನಸಿಕವಾಗಿ, ಕತ್ತಲನ್ನು ತಿರಸ್ಕರಿಸಿ. ಇದರಿಂದ ಬೆಳೆಯುವ ಕಂಪನಗಳು ಒಂದು ಕ್ರಾಂತಿಯನ್ನೇ ಉಂಟುಮಾಡುತ್ತವೆ.
- ಜೀವನದಲ್ಲಿ ಕಹಿಯನ್ನು ಕೋಪವನ್ನು ಮೀರಿ ಬದುಕುವುದು ಸಾಧನೆಯ ಒಂದು ಭಾಗ.
- ನಾವು ಬದಲಾಯಿಸಿಕೊಳ್ಳುತ್ತೇವೆ ಎಂದು ನಿಜವಾಗಲೂ ಬಯಸಿದರೆ, ನಾವು ಖಂಡಿತ ಬದಲಾಗುತ್ತೇವೆ.
- ನಮ್ಮ ಉತ್ತಮ ಮಾರ್ಗದರ್ಶಿ ನಮ್ಮೊಳಗೇ ಇದ್ದಾನೆ.
- ನಾವು ವ್ಯಕ್ತಗೊಳಿಸುವ ಪ್ರೀತಿಯ ಗುಣ–ಗಾತ್ರ ಗಳು ನಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಸೂಚಿಸುತ್ತವೆ.

## ಗುರೂಜಿ – ನನ್ನ ದಾರಿ ದೀಪ

ಅನುವಾದ: ಭಾಗ್ಯವತಿ

ಶಾಂತಿ ಮತ್ತು ಸಂತೃಪ್ತಿಯಿಂದ ಬದುಕಲು, ಜೀವನದ ಸತ್ಯಗಳನ್ನು, ದೇವರು ಅನುಗ್ರಹಿಸಿದ್ದನ್ನು ಒಪ್ಪಿಕೊಳ್ಳಲು ಗುರೂಜಿಯವರು ನನಗೆ ಕಲಿಸಿಕೊಟ್ಟಿದ್ದಾರೆ. ನನ್ನಲ್ಲಿ ಆಳವಾಗಿ ಬೇರೂರಿದ್ದ ನಿಷೇಧಗಳಿಂದ ಹೊರಗೆ ಬರಲು ಸಹಾಯಹಸ್ತ ನೀಡಿದ್ದಾರೆ. ನನ್ನೆಲ್ಲ ಸಮಸ್ಯೆಗಳಿಗೆ ಎಲ್ಲ ಕಾಲದಲ್ಲೂ ನೆರವು, ಭರವಸೆ ಮತ್ತು ಮಾರ್ಗದರ್ಶನಗಳು ಸಿಕ್ಕಿವೆ. ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಜೀವನದಲ್ಲಿ ನನಗೆ ತಂದೆಯಿಲ್ಲವೆಂಬ ಶೂನ್ಯತೆಯನ್ನು ತುಂಬಿದ್ದಾರೆ.

ಅವರೊಬ್ಬ ಋಷಿ ಆಗಿದ್ದರೂ, ತಾವು ದೇವರ ಮತ್ತು ಋಷಿಗಳ ಅನುಗ್ರಹವನ್ನು ರವಾನಿಸುವ ಮಾನವ–ಚಾನಲ್ ಅಷ್ಟೇ ಎಂದು ಹೇಳುತ್ತಾರೆ. ಯಾವಾಗಲೂ ನಾವು ಬೆಳಕಿಗೆ ಕೃತಜ್ಞರಾಗಿರ ಬೇಕೆಂದು ಸದಾ ಹೇಳುವ ಅವರು, ನೀವು ಕೊಡುವ ಗುರುದಕ್ಷಿಣೆಯೆಂದರೆ, 'ಬೆಳಕನ್ನು ಹರಡುವುದು' ಎಂದು ಹೇಳುತ್ತಾರೆ.

ನನ್ನ ಗುರು ನನ್ನ ಜೀವನದ ದಾರಿದೀಪ; ಪ್ರೀತಿ, ರಕ್ಷಣೆ, ಅಕ್ಕರೆಗಳ ಗಣಿ. ನನ್ನ ಗುರು ತೋರಿಸಿರುವ ದಾರಿಯನ್ನು ಕಳೆದುಕೊಳ್ಳದಿರುವುದೊಂದೇ ನಾನು ಅವರಿಂದ ಪಡೆದಿರುವುದೆಲ್ಲಕ್ಕೂ ಸ್ಪಂದಿಸುವ ರೀತಿ.

—ವೈಶಾಲಿ ಜೋಷಿ

ಬೆಳಕು, ದೈವತ್ವ, ಶರಣಾಗತಿ ಇಂಥ ಪದಗಳು ನನ್ನ ಗುರುವನ್ನು ಭೇಟಿಯಾಗುವವರೆಗೆ ಬರೀ ಶಬ್ದಗಳಾಗಿದ್ದವು. ಮೊದಲ ಬಾರಿಗೆ ನನ್ನ ಗುರುವಿನೊಂದಿಗೆ ಆದ ಭೇಟಿಯಲ್ಲೇ, ಬೆಳಕಿನೊಂದಿಗೆ ಮುಖಾಮುಖಿ ಭೇಟಿಯಾದೆ. ಅವರ ಪ್ರತಿಶಬ್ದವೂ ಮಂತ್ರದಂತಿತ್ತು. ಅವರು ಮಾತನಾಡುತ್ತಿದ್ದ ಹಾಗೆ ಆ ಶಬ್ದಗಳಿಗೆ ಜೀವ ಬಂದು ಅವು ಕಂಪಿಸಲಾರಂಭಿಸಿದವು. ಹೀಗೆ ನನಗೆ ಗುರೂಜಿಯವರ ಮಾತುಗಳನ್ನು ಅರ್ಥಮಾಡಿಕೊಳ್ಳಲು, ಅನುಸರಿಸಲು ಸುಲಭವಾಯಿತು.

ನಾನು ಗುರೂಜಿಯವರ ದೈವಿಕ ರಕ್ಷಣೆಯೊಳಗೆ ಬಂದಾಗಿನಿಂದ ನಾನು ಬದಲಾದ ವ್ಯಕ್ತಿಯಾದೆ ಮತ್ತು ಹೆಚ್ಚು ಹೆಚ್ಚು ಮಾನುಷಳಾದೆ. ಅವರು ನನ್ನ ಜೀವನದ ಉಸಿರು. —ಭಾಗ್ಯವತಿ

ನನ್ನ ಗುರುವಿನ ಬೆಳಕು ನನ್ನನ್ನು ಆಕರ್ಷಿಸಿ, ಅದ್ಭುತವಾದ ಧ್ಯಾನ ಮತ್ತು ಆಧ್ಯಾತ್ಮಿಕ ಪ್ರಪಂಚಕ್ಕೆ ನನ್ನನ್ನು ಪರಿಚಯಿಸಿತು. ಅಂದಿನಿಂದ ಆ ಬೆಳಕು ನನ್ನನ್ನು ರಕ್ಷಿಸುತ್ತ, ಅನೇಕ ಅವಕಾಶಗಳನ್ನು ಕೊಡುತ್ತ, ಬೆಳೆಯಲು ಉತ್ತೇಜಿಸುತ್ತಿದೆ. ನನ್ನ ವಿಫಲತೆಗಳಿಗೆ ನನ್ನ ಗುರು ಎಂದೂ ನನ್ನನ್ನು ದೂಷಿಸಲಿಲ್ಲ ಬದಲಿಗೆ ಹೆಚ್ಚು ಸಹಾಯ–ಉತ್ತೇಜನ ಕೊಟ್ಟರು. ನನ್ನ ಗುರುವಿಲ್ಲದಿದ್ದರೆ ನಾನು ಆಧ್ಯಾತ್ಮಿಕವಾಗಿ ಮತ್ತು ಲೌಕಿಕವಾಗಿ ಬದುಕುಳಿಯ ಲಾಗುತ್ತಿರಲಿಲ್ಲ. —ಸುಧಾಕರ್

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡದಲ್ಲಿ ಮತ್ತು ಮರಾಠಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿ – ನಮ್ಮ ಜೀವನದ ಬೆಳಕು

**ಅನುವಾದ: ಭಾಗ್ಯವತಿ**

ನಾನು ಅಜ್ಞಾನದ ಅಂಧಕಾರದಲ್ಲಿ ಮುಳುಗಿ ಅದೇ ಸತ್ಯವೆಂದು ನಂಬಿದ್ದಾಗ, ಅವರು ನನ್ನ ಜೀವನದಲ್ಲಿ ಪ್ರವೇಶಿಸಿ ನನಗೆ ಬೆಳಕನ್ನು ತೋರಿಸಿದರು. ಕಗ್ಗತ್ತಲೆಯಲ್ಲೂ ಸಹ ನಮ್ಮೊಳಗಿರುವ ದಿವ್ಯ–ಬೆಳಕಿನಿಂದ ಪ್ರಕಾಶಿಸಬಹುದು ಎಂಬ ಅರಿವನ್ನು ನನ್ನಲ್ಲಿ ಮೂಡಿಸಿದರು. ಎಲ್ಲಕಡೆ ಸ್ವಾರ್ಥತೆಯೇ ತುಂಬಿರುವ ಈ ಪ್ರಪಂಚದಲ್ಲಿ ನಾನು ಹೇಗೆ ಬದುಕಿ ಉಳಿಯುವೆ ಎಂದು ತೊಳಲಾಡುತ್ತಿದ್ದಾಗ, ಅವರು ನನಗೆ ಉನ್ನತ ಜೀವನದ ಮಾರ್ಗವನ್ನು ತೋರಿಸಿದರು.

ಮುಳುಗುತ್ತಿರುವ ಸೂರ್ಯ, ಚಂದ್ರೋದಯ, ಮಗುವಿನ ಮುಗ್ಧ ನಗು ಮತ್ತು ಅಂತರಂಗವನ್ನು ಕಲಕುವ ಸಂಗೀತದ ದಿವ್ಯ–ಸೌಂದರ್ಯದಲ್ಲಿ ಬೆಳಕು ಪ್ರಕಾಶಿಸುತ್ತಿರುವುದನ್ನು ನಮಗೆ ತೋರಿಸಿದ್ದಾರೆ. ಎಣೆಯಿಲ್ಲದ ಪ್ರೀತಿಯಿಂದ ತಮ್ಮಲ್ಲಿರುವ ಎಲ್ಲ ಜ್ಞಾನವನ್ನೂ ನಮಗೆ ಧಾರೆಯೆರೆದಿದ್ದಾರೆ. ಅದೆಲ್ಲವನ್ನೂ ನಾನು ಇನ್ನೂ ಪೂರ್ತಿಯಾಗಿ ಅಂತರ್ಗತ ಮಾಡಿಕೊಳ್ಳಲು ಆಗಿಲ್ಲ. ನನ್ನಲ್ಲಿ ನನ್ನದೇ ಆದ ಆದ್ಯತೆ, ಒಲವು, ಅಹಿತಗಳಿವೆ. ಇವಾವುಗಳ ಬಗ್ಗೆಯೂ ಅವರು ಟೀಕಿಸುವುದಿಲ್ಲ. ಎಂದಾದರೊಂದು ದಿನ ನನ್ನೆಲ್ಲ ಆದ್ಯತೆಗಳನ್ನೂ ನನ್ನ ಗುರುವಿನ ಆದ್ಯತೆಗಳೊಂದಿಗೆ ಒಂದಾಗಿಸಬೇಕು. ಇದಕ್ಕಾಗಿ, ಎಂದಿನಂತೆ ಅವರು ಕಾಯುತ್ತಿರಬೇಕು. —ಜಯಂತ್ ದೇಶ್‌ಪಾಂಡೆ

19 ವರ್ಷಗಳ ಹಿಂದೆ ನಾನು ನನ್ನ ಗುರುವನ್ನು ಸಂಧಿಸಿದೆ. ಬಹಳ ಸರಳ, ನಮ್ರ ಮತ್ತು ತೋರಿಕೆ ಇಲ್ಲದ ಪ್ರಾಗ್‌ಮ್ಯಾಟಿಕ್ ವ್ಯಕ್ತಿ. ಅವರು ಸಾಂಪ್ರದಾಯಿಕ ಗುರುವಿನಂತಿರದೆ ಪ್ರೊಫೆಸರ್‌ರಂತೆ ಕಾಣುತ್ತಿದ್ದರು. ಇಂದು ಅವರು ಒಬ್ಬ ಮಹಾನ್ ಗುರುವಾಗಿದ್ದರೂ, ಸೂಕ್ಷ್ಮ ಮಟ್ಟಗಳಲ್ಲಿ ಋಷಿಗಳೊಂದಿಗೆ ಕೆಲಸ ಮಾಡುತ್ತಿದ್ದರೂ ಅವರು ಸಹಜವಾಗಿಯೇ ಸರಳ, ವಿನಮ್ರ ಮತ್ತು ತೋರಿಕೆ ಇಲ್ಲದವರು. ಅವರೊಂದು ಅನಂತ ಬೆಳಕು. ನಿಜವಾದ ಗುರು.

ಈ ಋಷಿ–ಮಾರ್ಗವನ್ನು ಋಷಿ–ತತ್ವಗಳ ಆಧಾರದ ಮೇಲೆ ಕಟ್ಟಿದ್ದಾರೆ, ಬೆಳೆಸಿದ್ದಾರೆ. ಅವರೊಬ್ಬ ಪರಿಪೂರ್ಣ, ಆಧ್ಯಾತ್ಮಿಕ ಮಾರ್ಗದರ್ಶಿ. ತಾನು ವೈಭವದಿಂದ ಮೆರೆಯಬೇಕೆಂಬ ಆಸೆ ಲವಲೇಶವೂ ಅವರಲ್ಲಿಲ್ಲ.

ಅವರಲ್ಲಿ ಮಾನವ ಅರಿವಿಗೆ ಮೀರಿದ ಅಗಾಧವಾದ ಶಕ್ತಿಗಳಿವೆ. ಅವರು ಒಬ್ಬ ಸಾಧಕನನ್ನು ಋಷಿಯಾಗಿ ತಯಾರುಮಾಡಬಲ್ಲರು, ಎಲ್ಲ ಸಾಧಕರು ಋಷಿಗಳೊಂದಿಗೆ, ಅಂತರ್–ಶಕ್ತಿಯೊಂದಿಗೆ ಮತ್ತು ದೇವರೊಂದಿಗೆ ನೇರ ಸಂಪರ್ಕ ಬೆಳೆಸಿಕೊಳ್ಳಲು ಸಹಾಯಮಾಡಬಲ್ಲರು. ಆದರೆ ಅವರು ಹೇಳುವ ಪ್ರತಿಯೊಂದು ಸೂಚನೆಯನ್ನೂ ನಾವು ಅನುಸರಿಸಬೇಕು. ಸೂಕ್ಷ್ಮಮಟ್ಟಗಳಲ್ಲಿ ಕೆಲಸಮಾಡಲು ಒಬ್ಬರನ್ನು ಋಷಿಯಾಗಿ ಮೊಟ್ಟಮೊದಲಿಗೆ ತಯಾರು ಮಾಡಿದ್ದಾರೆ. ಋಷಿಗಳನ್ನು, ತಮ್ಮೊಳಗಿನ ಬೆಳಕನ್ನು ಸಂಪರ್ಕಿಸಿ ನೇರವಾಗಿ ಮಾರ್ಗದರ್ಶನ ಪಡೆಯಲು ಅನೇಕರನ್ನು ಸಿದ್ಧಪಡಿಸಿದ್ದಾರೆ. ಇಂಥ ಉದಾರತೆ ಮತ್ತು ಭವ್ಯಧ್ಯೇಯಗಳು ಒಬ್ಬ ಮಹಾನ್ ಋಷಿಗೆ ಮಾತ್ರ ಸಾಧ್ಯ. —ಶ್ಯಾಮಲಾದೇವಿ

ಗುರೂಜಿ, ಮಾನವರೋ ಅಥವಾ ದೇವರೋ? ಅನುಮತಿ ಇರುವಷ್ಟು ಮಟ್ಟದ ದೈವತ್ವವನ್ನು ಅಭಿವ್ಯಕ್ತಿಸುತ್ತಿರುವ ಮಾನವರೂಪಿಯೇ ಅಥವಾ ಇದರ ವ್ಯತಿರಿಕ್ತವೇ?

ತನ್ನ ಸಾಕಾರಗೊಂಡಿರದ ಕಲಾಕೃತಿಗಳಲ್ಲಿ, ತನ್ನನ್ನು ತಾನು ಕಳೆದುಕೊಳ್ಳದೆ ತಡೆಹಿಡಿದುಕೊಂಡಿರುವ ಕಲಾಕಾರ. ತನ್ನ ಭಾವನೆಗಳ ಪ್ರವಾಹವನ್ನು ಹೊರಗೆಡವದ ಸಂಯಮಿ ಬರಹಗಾರ. ಚಿಂತನೆಗಳನ್ನು ವ್ಯಕ್ತಪಡಿಸುವಲ್ಲಿ ಔಚಿತ್ಯ ಪ್ರಜ್ಞೆಯುಳ್ಳ ತತ್ವಶಾಸ್ತ್ರಜ್ಞ. ತನ್ನ ಪರಿಮಿತಿಗಳನ್ನು ಒಪ್ಪಿಕೊಳ್ಳುವ ಮಾನವ. ಮತ್ತು ಇಡೀ ಮನುಕುಲದ ಬಗ್ಗೆ ಕನಸುಗಳನ್ನು ತುಂಬಿಕೊಂಡಿರುವ, ಮಹದುದ್ದೇಶವನ್ನು ಹೊಂದಿರುವ ಗುರು ಅವರು. ಪ್ರತಿಯೊಬ್ಬರಿಗೂ ಅವರಲ್ಲಿ ಒಂದು ಕಾರ್ಯಯೋಜನೆ ಇದೆ. ಹೊಸ ಯುಗವನ್ನು ಸ್ಥಾಪಿಸುವ ಅವರ ನಿರ್ಧಾರ ಅಚಲ.

ಅವರು ಮನುಕುಲದ ಪ್ರತಿನಿಧಿಗಳು ಮತ್ತು ಭಗವಂತನ ಮೂರ್ತರೂಪ; ಮಾನವ ಮತ್ತು ದೈವಗಳ ನಡುವಣ ಸೇತುವೆ. ಸರ್ವೋತ್ತಮವಾದ ಋಷಿ–ಪರಂಪರೆಗೆ ಅವರೊಂದು ದೃಷ್ಟಾಂತ. ಅವರಿಗೆ ಕುರಿಮಂದೆ ಬೇಕಿಲ್ಲ ಏಕೆಂದರೆ ಅವರು ಪ್ರತಿಯೊಬ್ಬರನ್ನೂ ತಮ್ಮ ಅಂತರಂಗದಲ್ಲಿರುವ ಸಿಂಹದೊಂದಿಗೆ ಪರಿಚಯಿಸುವರು. ಅವಲಂಬೀ ಅನುಯಾಯಿಗಳಾಗುವುದರಿಂದ ನಮ್ಮನ್ನು ಕಾಪಾಡಿ, ನಮ್ಮ ಮೋಕ್ಷದ ಮಹಾದ್ವಾರ ಅವರಾಗಿದ್ದಾರೆ.

ಅವರು ನನ್ನ ಗುರು– ನನ್ನ ವೈಯಕ್ತಿಕ ಪರಬ್ರಹ್ಮ. 70ನೇ ವಯಸ್ಸಿನಲ್ಲಿ ಬೆಳಕಿನ ಈ ದೂತ ಮೊದಲಿಗಿಂತ ಹೆಚ್ಚು ಸದೃಢರಾಗಿದ್ದಾರೆ ಏಕೆಂದರೆ ಹಿಂದೆಂದಿಗಿಂತ ಹೆಚ್ಚಾಗಿ, ಮನುಕುಲದ ಭವಿಷ್ಯ ಅವರ ಮೇಲೆ ನಿಂತಿದೆ. —ಸೀಮಾ ಅಲ್‌ಮೇಲ್

ಸಾವಿರಾರು ಮಂದಿ ಪ್ರಪಂಚದಲ್ಲಿ ಆಗುತ್ತಿರುವ ಬದಲಾವಣೆಗಳು, ಆರ್ಥಿಕ ಕುಸಿತ, ಯುದ್ಧಗಳ ಬಗ್ಗೆ ಮಾತನಾಡುವರು. ಆದರೆ ಕೆಲವೇ ಕೆಲವು ಮಂದಿ ಮಾತ್ರ ಈಗ ಪ್ರಪಂಚದಾದ್ಯಂತ ಆಗುತ್ತಿರುವ ಆಧ್ಯಾತ್ಮಿಕ ಬದಲಾವಣೆಗಳನ್ನು ಆಧಾರಬದ್ಧವಾಗಿ ಹೇಳಬಲ್ಲರು. ಅಂಥಹವರಲ್ಲಿ ನಮ್ಮ ಗುರೂಜಿಯವರು ಒಬ್ಬರು.

ಅವರು ಇಲ್ಲಿ ಮತ್ತು ಉನ್ನತ ಆಯಾಮಗಳಲ್ಲಿ ಘಟಿಸುತ್ತಿರುವ ಆಧ್ಯಾತ್ಮಿಕ ಬದಲಾವಣೆಗಳನ್ನು ನೋಡಬಲ್ಲವರಾಗಿದ್ದಾರೆ. ಪ್ರಜ್ಞಾ–ಪಲ್ಲಟ ಮತ್ತು ಫೋಟಾನ್ ಬೆಲ್ಟ್ ಪ್ರವೇಶಗಳಂಥ ಆಧ್ಯಾತ್ಮಿಕ ಬದಲಾವಣೆಗಳನ್ನು ಜನತೆ ಸಮರ್ಥವಾಗಿ ನಿಭಾಯಿಸಲು ಎಲ್ಲ ರೀತಿಯಲ್ಲಿ ಸಹಾಯ ಮತ್ತು ರಕ್ಷಣೆ ನೀಡಿ ದಾರಿತೋರಿಸಬಲ್ಲರು. ಸಮಸ್ತ ಮಾನವಕುಲವನ್ನು ಬೆಳಕಿನ ಇರವಿಗೆ ಜಾಗೃತಗೊಳಿಸುವುದು ಅವರ ಮಹದೋದ್ದೇಶ.

ಗುರೂಜಿಯವರು, ಜೀವನವನ್ನು ಸಂಪೂರ್ಣವಾಗಿ ಬದುಕುವ ಮತ್ತು ಪ್ರೀತಿಸುವ ಅವಶ್ಯಕತೆ, ಹಾಗೂ ಆಧ್ಯಾತ್ಮಿಕತೆಯನ್ನು ನಾನಾರೀತಿಗಳಲ್ಲಿ ವಿವರಿಸುವುದನ್ನು ಸಾಂಪ್ರದಾಯಿಕ ಸ್ವಾಮೀಜಿಗಳು ನೋಡಿದರೆ ಆಶ್ಚರ್ಯಪಡುತ್ತಾರೆ. ಸದಾ ಮುಂಚೂಣಿಯಲ್ಲಿರುವ ನಮ್ಮ ಗೈಡ್ ಗುರೂಜಿಯವರನ್ನು ನಾವೆಂದೂ ಅರ್ಥ ಮಾಡಿಕೊಳ್ಳಲಾರೆವು. —ರಾಮಚಂದ್ರ ಕೆ.

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ಬೆಳಕು ಎಂದರೇನು?**

ಉ: ಬೆಳಕು ದೇವರು.

**ಪ್ರ: ಬೆಳಕು ಎಲ್ಲಿದೆ?**

ಉ: ಬೆಳಕು ಎಲ್ಲೆಲ್ಲೂ ಇದೆ.

**ಪ್ರ: ಬೆಳಕು ಎಲ್ಲಾ ಕಡೆ ಇದ್ದರೆ, ಅದನ್ನು ಪ್ರಸಾರ ಮಾಡುವ ಅವಶ್ಯಕತೆ ಇದೆಯೇ?**

ಉ: ಈ ಬೆಳಕು ವಿಭಿನ್ನ ಕಂಪನದಲ್ಲಿದೆ. ಅದಕ್ಕಾಗಿಯೇ ನಾವು ಈ ಬೆಳಕನ್ನು ನೋಡಲು ಸಾಧ್ಯವಿಲ್ಲ ಮತ್ತು ನಾವು ಈ ಬೆಳಕನ್ನು ಪ್ರಸಾರ ಮಾಡಬೇಕು.

**ಪ್ರ: ಬೆಳಕು ಅದಾಗಿಯೇ ಕೆಳಗಿಳಿದು ಬರುವುದಿಲ್ಲವೇ? ನಾವು ಪ್ರಸಾರ ಮಾಡಬೇಕೇ?**

ಉ: ಅದು ತಾನಾಗಿಯೇ ಕೆಳಗಿಳಿದು ಬರಲು ಸಾಧ್ಯವಿಲ್ಲ. ನಾವು ಅದನ್ನು ಅರಸಬೇಕು. ನಾವು ಅದರ ಸೂಕ್ಷ್ಮ ಕಂಪನಗಳನ್ನು ಮಾನವಮಟ್ಟಕ್ಕೆ ಪ್ರಸಾರ ಮಾಡಬೇಕು. ನಮಗೆ ಗೊತ್ತಿಲ್ಲದ ನಿಯಮಗಳಿವೆ. ಈ ಬೆಳಕನ್ನು ತಾನಾಗಿಯೇ ಕೆಳಗಿಳಿದು ಬರುವಲ್ಲಿ ಇಂಥ ಒಂದು ನಿಯಮ ತಡೆಯುತ್ತದೆ.

**ಪ್ರ: ನಾವು ಧ್ಯಾನದ ಬದಲಿಗೆ ಬೆಳಕಿನ ಪ್ರಸಾರ ಮಾಡಬಹುದೇ?**

ಉ: ನಾವು ಋಷಿಗಳು ಚಾಲನೆಗೊಳಿಸುವ ಪ್ರಕ್ರಿಯೆಗಳನ್ನು ಜೀವಂತವಾಗಿಡಲು ಮತ್ತು ಅವುಗಳನ್ನು ಬಲಪಡಿಸಲು ಧ್ಯಾನ ಮಾಡಬೇಕು.

**ಪ್ರ: ಪಾದಯಾತ್ರೆಗಳು ನಮಗೆ ಆಧ್ಯಾತ್ಮಿಕವಾಗಿ ಸಹಾಯವಾಗುವುದೇ?**

ಉ: ನಾವು ಏತಕ್ಕೆ ಅದನ್ನು ಮಾಡುತ್ತೇವೆ ಎಂದು ತಿಳಿದಿದ್ದರೆ ಮತ್ತು ಆತನಿಗೆ ಅದರಿಂದಾಗುವ ಆಧ್ಯಾತ್ಮಿಕ ಪ್ರಯೋಜನಗಳು ಖಚಿತವಾಗಿ ಗೊತ್ತಿದ್ದರೆ ಪಾದಯಾತ್ರೆ ಮಾಡಬಹುದು.

**ಪ್ರ: ಆಧ್ಯಾತ್ಮಿಕ-ಪ್ರಭು ಮತ್ತು ಅವತಾರಗಳ ನಡುವಿನ ಅಂತರವೇನು?**

ಉ: ಆಧ್ಯಾತ್ಮಿಕ-ಪ್ರಭುಗಳು ವಿಶೇಷ ಆತ್ಮಗಳು, ಅವರುಗಳು ಮನುಕುಲಕ್ಕೆ ಮಾರ್ಗದರ್ಶನ ಮಾಡಲು ಈ ಭೂಮಿಗೆ ಬರುತ್ತಾರೆ. ಅವತಾರಗಳು ದೇವರ ಒಂದು ಭಾಗ. ಅವರು ಸಾಂದರ್ಭಿಕವಾಗಿ, ಕಾರ್ಯ ನಿರ್ವಹಣೆಗಾಗಿ ಬರುತ್ತಾರೆ. ಅವರು ನಕಾರಾತ್ಮಕ ವ್ಯಕ್ತಿಗಳು ಮತ್ತು ಶಕ್ತಿಗಳನ್ನು ನಿರ್ನಾಮ ಮಾಡಲು ಅವತರಿಸುತ್ತಾರೆ.

**ಪ್ರ: ನಾವು ಧ್ಯಾನದ ಅಭ್ಯಾಸ ಮಾಡದೆ ಹೀಲಿಂಗ್ ಅಭ್ಯಾಸ ಮಾಡಬಹುದೇ?**

ಉ: ಹೀಲಿಂಗ್ ಒಂದು ಆಧ್ಯಾತ್ಮಿಕ ಪ್ರಕ್ರಿಯೆ ಮತ್ತು ಅದನ್ನು ಸ್ವತಂತ್ರವಾಗಿ ಅಭ್ಯಾಸ ಮಾಡ ಬಾರದು. ನಾವು ಹೀಲ್ ಮಾಡಿದಾಗ, ಕೆಲವು ಕರ್ಮಗಳು ಕ್ರಿಯಾಶೀಲವಾಗುತ್ತವೆ ಅಥವಾ ನಾವು ಕರ್ಮಗಳನ್ನು ಆಕರ್ಷಿಸುತ್ತೇವೆ. ಅವುಗಳ ಫಲಗಳನ್ನು ಎದುರಿಸಿ, ಕಳೆದುಕೊಳ್ಳಬೇಕಾಗುತ್ತದೆ. ಅದಕ್ಕೇ ಧ್ಯಾನದ ಅಭ್ಯಾಸವಿಲ್ಲದೆ ಹೀಲಿಂಗ್ ಅಭ್ಯಾಸ ಮಾಡಬಾರದು.

**ಪ್ರ: ದೀಕ್ಷೆ ಎಂದರೇನು?**

ಉ: ದೀಕ್ಷೆ ಎಂದರೆ ಒಬ್ಬ ವ್ಯಕ್ತಿಗೆ ಚೈತನ್ಯವನ್ನು ವರ್ಗಾಯಿಸಿ, ಅನೇಕ ವರ್ಷಗಳಿಂದ ಸುಪ್ತವಾಗಿರುವ ಕೆಲವು ಪ್ರಕ್ರಿಯೆಗಳನ್ನು ಕ್ರಿಯಾಶೀಲಗೊಳಿಸುವುದು.

**ಪ್ರ: ನಮ್ಮ ಈ ಮಾರ್ಗದಲ್ಲಿ ಧ್ಯಾನಮಾಡುವುದರ ಗುರಿಯೇನು?**

ಉ: ನೀವು ಗುರಿಯನ್ನು ಆರಿಸಿಕೊಳ್ಳಬೇಕು. ಈ ಮಾರ್ಗದಲ್ಲಿ ಎಲ್ಲಾ ಸಾಧ್ಯತೆಗಳಿವೆ. ಸಾಧನೆಗೆ ತಕ್ಕಂತೆ ಫಲಿತಾಂಶಗಳಿರುತ್ತವೆ. ಇದು ಒಂದು ನಿಯಮ. ❑

## ಸಂಕ್ಷಿಪ್ತ ರಿಟ್ರೀಟ್‌ಗಳು

**ಗುರೂಜಿ ಕೃಷ್ಣಾನಂದ**


ಜನರು ನನ್ನನ್ನು ಬಹು ವಿಧವಾದ ಮತ್ತು ಗಂಭೀರ ಕಾರಣಗಳಿಗಾಗಿ ನನ್ನನ್ನು ಭೇಟಿಯಾಗಲು ಇಚ್ಛಿಸುತ್ತಾರೆ ಎಂದು ನನಗೆ ತಿಳಿದಿದೆ. ಅದಕ್ಕಾಗಿ ನನಗೆ ಸಂತೋಷವಾಗುತ್ತದೆ. ನಾನೂ ಸಹ ಭೇಟಿಮಾಡಲು ಬಯಸುತ್ತೇನೆ. ಆದರೆ ಕೆಲಸ ಮತ್ತು ಆಧ್ಯಾತ್ಮಿಕ ಜವಾಬ್ದಾರಿಗಳು ಇದನ್ನು ನಿಷೇಧಿಸುತ್ತಿವೆ. ಅನೌಪಚಾರಿಕವಾಗಿ ಜನರನ್ನು ಭೇಟಿಮಾಡಲೆಂದೇ, ನಾನು ಐ-ಗುರೂಜಿ ಸೆಶನ್‌ಗಳನ್ನು ಪ್ರಾರಂಭಿಸಿದೆ. ಆದರೆ ನಾವು ಜನರನ್ನು ಸ್ಕ್ರೀನ್ ಮಾಡಿ ಸಂಖ್ಯೆಯನ್ನು ಮಿತಿಗೊಳಿಸಬೇಕಾಯಿತು. ನನಗೆ ಈ ಸೆಷನ್‌ಗಳು ತೃಪ್ತಿಕರವಾಗಿರಲಿಲ್ಲ. ಇನ್ನುಮುಂದೆ, 3ನೇ ಶನಿವಾರಗಳಂದು, ನಾನು ಅಂತರ್-ಮಾನಸದಲ್ಲಿ ಸಂಕ್ಷಿಪ್ತ ರಿಟ್ರೀಟ್‌ಗಳನ್ನು ಏರ್ಪಡಿಸುತ್ತೇನೆ. ನಾನು ನಮ್ಮ ಸಾಧಕರನ್ನು ಸ್ವಾಗತಿಸುತ್ತೇನೆ. ರೆಗ್ಯುಲರ್ ಮತ್ತು ದೂರ-ಕಲಿಕೆ ಸಾಧಕರು, ಮತ್ತು ನನ್ನ ಜೊತೆ ಅನೌಪಚಾರಿಕವಾಗಿ ಮತ್ತು ಗಾಢವಾಗಿ ಕಾಲ ಕಳೆಯಬೇಕೆಂದು ಇಚ್ಛಿಸುವ ಯಾರೇ ಆಗಲಿ, ಅವರನ್ನು ನಾನು ಸ್ವಾಗತಿಸುತ್ತೇನೆ.

ರಿಟ್ರೀಟ್‌ಗಳಲ್ಲಿ ಭಾಗವಹಿಸಲಿಚ್ಛಿಸುವವರು ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು. ❑


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| iGuruji | 150/- |
| Living in the Light of My Guru | 220/- |
| A Package from the Rishis (containing 5 Booklets) | 250/- |
| - How to Meditate | |
| - Dhyana Yoga | |
| - Descent of Soul | |
| - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Patanjali Yoga Sutra | (out of print) |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| ಬೆಳಕಿನ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ | 150/- |
| ಅನಿಸಿಕೆಗಳು | 120/- |
| ಋಷಿಗಳಿಂದ ಬಂದ ಕೊಡುಗೆ (ಐದು ಪುಸ್ತಕಗಳು) | 250/- |
| – ಧ್ಯಾನ ಮಾಡುವುದು ಹೇಗೆ | |
| – ಧ್ಯಾನ ಯೋಗ | |
| – ಆತ್ಮದ ಅವರೋಹಣ | |
| – ಶಂಬಲ ನಿಯಮಗಳ ಅಭ್ಯಾಸ | |
| – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/ |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| ध्यान कैसे करे (Hindi) | 50/- |
| प्रकाशमय जीवन (Hindi) | 10/- |
| தியானம் செய்வது எப்படி | 50/- |
| ஒளியின் வாயில்கள் | 200/- |
| ஒளியில் வாழ்க்கை | 10/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



**ಗುರೂಜಿ ಕೃಷ್ಣಾನಂದ (1939)**

### ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

**(ಸಂಗ್ರಹ: ಸುಧಾಕರ್, ಅನು: ಸ್ವರ್ಣಲತ)**

ಒಂದು ಭಾನುವಾರ, ಶಿವರಾತ್ರಿಯಂದು, ತಪೋನಗರಕ್ಕೆ ಬಂದಿದ್ದರೂ ನನ್ನ ಮಗಳನ್ನು ನೋಡಿಕೊಳ್ಳಬೇಕಾದ ಕಾರಣ ಧ್ಯಾನದ ತರಗತಿಗೆ ಹಾಜರಾಗಲಿಲ್ಲ. ಆದರೆ ನನಗೆ ಧ್ಯಾನವನ್ನು ತಪ್ಪಿಸಿಕೊಳ್ಳಲು ಮನಸ್ಸಿರಲಿಲ್ಲವಾಗಿ, ನನ್ನ ಛಾಯಾಪುರುಷನಿಗೆ ತರಗತಿಯ ಒಳಗೆ ಹೋಗಿ ನನ್ನ ಬದಲು ಧ್ಯಾನಮಾಡಲು ವಿನಂತಿಸಿಕೊಂಡೆ. ಅದರಂತೆ ನನ್ನ 'ಛಾಯಾಪುರುಷ' ಧ್ಯಾನಮಾಡಿತು.

ಶಿವರಾತ್ರಿಯಂದು ರಾತ್ರಿ ನನಗೆ ನಿದ್ದೆ ಬರಲಿಲ್ಲವಾಗಿ ಸೂಕ್ಷ್ಮ ಶರೀರ ಯಾನ ಮಾಡಲಾಗಲಿಲ್ಲ. ಆದರೆ ನಡೆದ ಘಟನೆಗಳನ್ನೆಲ್ಲವನ್ನು ಎಚ್ಚರ ಸ್ಥಿತಿಯಲ್ಲೇ ನೋಡಿದೆ. ಕೈಲಾಸವು ಉಜ್ವಲ ಬೆಳಕಿನಿಂದ ಕಂಗೊಳಿಸುತ್ತಿತ್ತು. ಶಿವ-ಪಾರ್ವತಿ, ಗಣೇಶ ಹಾಗೂ ಕಾರ್ತಿಕೇಯ ಭೂಮಿಗಿಳಿದು ಬಂದದ್ದನ್ನು ನೋಡಿದೆ. ಎಲ್ಲಾ ಋಷಿಗಳು ಶಿವಸ್ತುತಿ ಮಾಡಿದರು ಮತ್ತು ಅವರನ್ನು ಭೂಮಿಗೆ ಕರೆತಂದರು. ಅವರೊಡನೆ ಅಮರ ಮಹರ್ಷಿ, ಗುರೂಜಿ, ಮೈತ್ರೇಯ, ಎಖಾರ್ಟ್‌ಟೋಲ್ ಸಹ ಇದ್ದರು. ಎಲ್ಲರೂ ಬೆಳಕಿನ ರೂಪದಲ್ಲಿದ್ದರು.

ಒಂದು ದಿನ ಧ್ಯಾನಮಾಡುತ್ತಿದ್ದಾಗ, ಒಂದು ಧ್ವನಿ "ಮಾಯನ್ ನಾಗರೀಕತೆ ಒಂದು ಪ್ರಖ್ಯಾತ ಮತ್ತು ಬಹಳ ಮುಂದುವರೆದ ನಾಗರೀಕತೆ. ಅದನ್ನು ತಪ್ಪು ಬಳಕೆ ಮಾಡಿದ್ದರಿಂದ, ದಿವ್ಯಶಕ್ತಿಯು ಅದನ್ನು ನಾಶಪಡಿಸಲು ನಿರ್ಧರಿಸಿತು. ಆದರೆ ಎಲ್ಲಾ ಜ್ಞಾನವನ್ನು ಒಂದು ರಹಸ್ಯ ಗುಹೆಯಲ್ಲಿ ಇಡಲಾಗಿದೆ ಮತ್ತು ಒಬ್ಬ ಋಷಿ ಅದನ್ನು ರಕ್ಷಿಸುತ್ತಿದ್ದಾರೆ. ನಾವು ಬೆಳಕಿನ ಯುಗವನ್ನು ಪ್ರವೇಶಿಸಿದಾಗ ಈ ಎಲ್ಲಾ ಜ್ಞಾನವು ನಮಗೆ ಲಭ್ಯವಿದೆ" ಎಂದು ಹೇಳಿತು.

—ಪ್ರಿಯಾಂಕ ಮಿಶ್ರ

ಫೆಬ್ರವರಿ 7ರಂದು ನಮ್ಮ ಕಂಪನಿಯ ಮೀಟಿಂಗ್ ಇತ್ತು. ಅದು ಸಮಯಕ್ಕೆ ಸರಿಯಾಗಿ ಶುರುವಾದರೆ ನನಗೆ ಧ್ಯಾನ ತಪ್ಪಿಹೋಗುವುದೆಂಬ ಕಾರಣದಿಂದ ನನ್ನ ಧ್ಯಾನ ಮುಗಿಯುವವರೆಗೆ ಸದಸ್ಯರು ಬರದಿರಲೆಂದು ಋಷಿಗಳನ್ನು ಪ್ರಾರ್ಥಿಸಿದೆ. ಅದರಂತೆ ನನ್ನ ಧ್ಯಾನ ಮುಗಿದ ಒಂದು ನಿಮಿಷದ ನಂತರ ಸದಸ್ಯರ ಆಗಮನ ಶುರುವಾಯಿತು.

ನನ್ನ ಎರಡನೇ ವಾರದ ಧ್ಯಾನದಲ್ಲಿ ಒಂದು ಕಣ್ಣು ಥಳಕ್ಕನೆ ಬಂದು ನನ್ನನ್ನು ದಿಟ್ಟಿಸಿ ಮಾಯವಾಗುತ್ತಿದ್ದ ಅನುಭವವಾಯಿತು.

ನಾವು ಸಾಕಿದ್ದ 'ಇಗ್ವಾನ' ನಮ್ಮ ನಿರ್ಲಕ್ಷ್ಯದಿಂದ ಮರಣಿಸಿದಾಗ ಮನಸ್ಸಿಗೆ ಬಹಳ ಬೇಸರವಾಯಿತು. ಆದರೆ ಅದು ನನ್ನ ಧ್ಯಾನದಲ್ಲಿ ನನ್ನನ್ನು ಸಂಪರ್ಕಿಸಿ ಬಹಳ ಸಂತೋಷವಾಗಿರುವುದಾಗಿಯೂ ನಾನು ಅದರ ಬಗ್ಗೆ ಚಿಂತಿಸಬೇಕಿಲ್ಲವೆಂದೂ ತಿಳಿಸಿ ಕಾಡಿನಲ್ಲಿ ಕಣ್ಮರೆಯಾಯಿತು.

—ಚೆರ್ರಿ ಮಾರ್ಜಿನ್ಸ್ಕಿ

ಗ್ರಹಣದ ದಿನ ವಿಶೇಷ ಧ್ಯಾನ ಮಾಡುತ್ತಿದ್ದಾಗ ಗುರೂಜಿಯವರು ಒಂದು ಸಲ ಶ್ರೀಕೃಷ್ಣನಂತೆಯೂ ಮತ್ತೊಮ್ಮೆ ಪ್ರಕಾಶಮಾನವಾದ ಬಿಳಿಯ ಬೆಳಕಿನಂತೆಯೂ ಕಂಡರು. ಆದರೆ ಕಣ್ತೆರದು ನೋಡಿದಾಗ ಮೊದಲಿನಂತೆಯೇ ಇದ್ದರು. ನಾನು ಬೆಳಕನ್ನು ಚಾನಲ್ ಮಾಡುತ್ತಿದ್ದಾಗ ಬೆಳಕು ಸುತ್ತಲೂ ಪ್ರಸರಿಸುತ್ತಿದ್ದ ಅರಿವು ಮಾತ್ರವೇ ಇತ್ತು. ವೇಳೆ ಕಳೆದುದೇ ತಿಳಿಯಲಿಲ್ಲ. ನನ್ನ ದೇಹದಲ್ಲಿನ ಏಳೂ ಚಕ್ರಗಳು ಪ್ರಕಾಶಮಾನವಾಗಿ ಬೆಳಗುತ್ತಿದ್ದವು. ನನ್ನ ಇಡೀ ದೇಹ ಪಾರದರ್ಶಕವಾಗಿ, ಬೆಳಕಿನಿಂದ ತುಂಬಿದಂತೆ ಕಾಣುತ್ತಿತ್ತು.

—ಸುಜಾತ

ಜನವರಿ 11 ರಂದು ಶಂಬಲ ವಿಶೇಷ ತರಗತಿಯಲ್ಲಿ ಗುರೂಜೀಯವರು ಒಂದು ಮಂತ್ರವನ್ನು ಪುನರುಚ್ಚರಿಸಲು ತಿಳಿಸಿದರು. ನಾನು ಕಣ್ಣುಮುಚ್ಚಿ ಇನ್ನೇನು ಆ ಮಂತ್ರವನ್ನು ಹೇಳಬೇಕು ಎಂದಿದ್ದಾಗ, ಒಂದು ಮಧುರವಾದ ಪಿಸು ಧ್ವನಿ ಮಂತ್ರವನ್ನು ಉಚ್ಚರಿಸುತ್ತಿರುವುದು ಕೇಳಿಸಿತು. ಮೂರು ಬಾರಿ ಉಚ್ಚಾರಣೆಯ ನಂತರ, ಮಂತ್ರ ಕೇಳಿಸುವುದು ಕಡಿಮೆಯಾಯಿತು. ಆದರೂ ನಾನು ಆಲಿಸಿ ಕೇಳಿದರೆ, ನನಗೆ ಕೇಳಿಸುತ್ತಿತ್ತು. ಇದು ಒಂದು ರೋಚಕವಾದ ಅನುಭವ.

—ಉಮಾಮಹೇಶ್ವರಿ

ಫೆಬ್ರವರಿ 6ರಂದು ನನ್ನ ಕನಸಿನಲ್ಲಿ ಹರಿಯುತ್ತಿದ್ದ ನದಿಯ ಮಧ್ಯದಿಂದ ಒಂದು ಸುಂದರ ಶಿವಲಿಂಗ ಉದ್ಭವಿಸಿದ್ದನ್ನು ಕಂಡೆ. ಅದರ ಸುತ್ತಲು ನೀರು ಸುತ್ತುವರಿದು ಅದಕ್ಕೆ ಅಭಿಷೇಕ ಮಾಡುತ್ತಿದೆಯೇನೋ ಎಂಬಂತಿತ್ತು. ನಾನು ಅದಕ್ಕೆ ಪ್ರೀತಿ ಹಾಗೂ ಗೌರವವನ್ನು ಅರ್ಪಿಸಿದ ತಕ್ಷಣ ಒಂದು ಹಾವು ಬಂದು ಹೆಡೆಯೆತ್ತಿ ನೇರವಾಗಿ ನಿಂತಿತು.

ಕೆಲವು ದಿನಗಳ ನಂತರ, ಅನೇಕ ಜನರು ಯಾವುದೋ ಪೂಜಾ ಸಮಾರಂಭಕ್ಕೆ ಸೇರಿರುವಂತೆ ಕನಸಾಯಿತು. ನಾನು ಅಲ್ಲಿಗೆ ಹೋದಾಗ ಅವರಲ್ಲಿ ಒಂದು ಶಿವಲಿಂಗಕ್ಕೆ ಬಗೆ ಬಗೆಯ ಪುಷ್ಪಗಳಿಂದ ಪೂಜಿಸುತ್ತಿದ್ದರು. ಅದರ ಪಕ್ಕದಲ್ಲಿ ಒಂದು ತ್ರಿಶೂಲ ಇತ್ತು. ಅದಕ್ಕೆ ಒಂದು ಹಾವು ಸುತ್ತಿಕೊಂಡಿತ್ತು. ಪೂಜಾರಿ, ನನ್ನನ್ನು ಕಂಡು ನಾಗರಾಜ ನನ್ನನ್ನು ಹರಸಿರುವನೆಂದೂ, ಇಂತಹ ಅವಕಾಶ ಎಲ್ಲರಿಗೂ ಸಿಗುವುದಿಲ್ಲವೆಂದೂ, ನಾನು ಬಹಳ ಅದೃಷ್ಟವಂತಳೆಂದೂ, ಹೇಳಿದನು.

—ವಿದ್ಯಾಅರೋರ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ